


"ಜನಪದ ಹಾಲುಮತ ಕಾವ್ಯ"ದ ಸಿರಿಕಂಠ

ಶ್ರೀ ಸಿದ್ದಪ್ಪ ಮೇಟಿ

ಚಂದ್ರಕಾಂತ ಕರದಳ್ಳಿ

ಜನಪ್ರಿಯ ಜಾನಪದ ಪುಸ್ತಕ ಮಾಲೆ - ೬೦

"ಜನಪದ ಹಾಲುಮತ ಕಾವ್ಯ"ದ ಸಿರಿಕಂಠ

ಶ್ರೀ ಸಿದ್ದಪ್ಪ ಮೇಟಿ

ಚಂದ್ರಕಾಂತ ಕರದಳ್ಳಿ

ಕರ್ನಾಟಕ ಜಾನಪದ ಪರಿಷತ್ತು
ನಂ.೧, ಜಲದರ್ಶಿನಿ ಬಡಾವಣೆ
ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್.ರಸ್ತೆ, ಬೆಂಗಳೂರು-೫೬೦ ೦೫೪

SIDDAPPA METI - A pen Portrait by
Chandrakantha Karadalli, Shahapura, Published by
Karnataka Janapada Parishat, #1, Jaladarshini Layout, Near
M.S. Ramaiah Hospital Main Gate, New BEL Road, Bangalore
- 560 054, Phone: 080-23605033. Janapada Loka: 27201143

Pages: 40 Price: Rs.15/- Year: 2011

ಪ್ರಥಮ ಮುದ್ರಣ : ೨೦೧೧
ಪ್ರತಿಗಳು : ೧೦೦೦
ಪುಟಗಳು : ೪೦
ಬೆಲೆ : ರೂ.೧೫/- (ಹದಿನೈದು ರೂಪಾಯಿಗಳು)

ಮುದ್ರಕರು: **'ವರ್ಣ ಸಲ್ಯೂಷನ್ಸ್',** ನಂ.15/1ಬಿ, "ಲಕ್ಷ್ಮಿನಿವಾಸ",
14ನೇ ಅಡ್ಡರಸ್ತೆ, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10,
ದೂ: 080-42123547/48, E-mail: vernasolutions@gmail.com

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು–ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಶ್ರೀ ಚಂದ್ರಕಾಂತ ಕರದಳ್ಳಿ** ಅವರು **'ಜನಪದ ಹಾಲುಮತ ಕಾವ್ಯದ ಸಿರಿಕಂಠ ಶ್ರೀ ಸಿದ್ದಪ್ಪ ಮೇಟಿ'** ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೦೧.೦೨.೨೦೧೧

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

“ಜನಪದ ಹಾಲುಮತ ಕಾವ್ಯ”ದ ಸಿರಿಕಂಠ

ಶ್ರೀ ಸಿದ್ದಪ್ಪ ಮೇಟಿ

“ಜನಪದ ಸಾಹಿತ್ಯವೆಂದರೆ ಜನತೆಯ ಜೀವಾಳ”. ತ್ರಿಪದಿಗಳು, ಹಾಡುಗಬ್ಬಗಳು, ಅಲಾಯಿ ಪದಗಳು, ಬೀಸುವ ಹಾಡುಗಳು, ಕುಟ್ಟುವ ಹಾಡುಗಳು, ರಾಶಿ ಮಾಡುವ ಹಾಡುಗಳು, ಸದಿ ತೆಗೆಯುವ, ಕಳೆ ಕೀಳುವ, ಸುಖ–ಸಂತೋಷ, ದುಃಖ–ಮರಣ ಎಂಥ ಪ್ರಸಂಗಗಳೇ ಇರಲಿ ಅಲ್ಲಿ ಜನಪದ ಹಾಡಿನ ಸೊಗವಿರುತ್ತದೆ. ಕೋಗಿಲೆಯಂಥ ಕೂಜನವಿರುತ್ತದೆ.

ಕೋಗಿಲೆಯ ಕೂಜನವನ್ನು ಕೇಳಿ ಎಷ್ಟು ಸಂತೋಷಿಸುತ್ತೇವೋ ಅದಕ್ಕಿಂತ ಹೆಚ್ಚಿನ ಸಂತೋಷ ಈ ಜಾನಪದ ಪ್ರಕಾರಗಳಿಂದ ಸಿಗುತ್ತದೆ. ಜನಪದ ಸಾಹಿತ್ಯದ ವಿಶೇಷವೆಂದರೆ ಇದನ್ನು ಕಟ್ಟುವವರು ಮತ್ತು ಹಾಡುವವರು ಹಳ್ಳಿಯ ಅನಕ್ಷರಸ್ಥ ಸಮೂಹದ ಸ್ತ್ರೀ–ಪುರುಷರು. ಅವರಿಗೆ ಅಕ್ಷರದ ಪರಿಚಯವಿಲ್ಲ. ಓದು–ಬರಹ ಬಲ್ಲವರಲ್ಲ. ಆದರೆ ಕಾವ್ಯ ಕಟ್ಟುವ, ಕಥೆ ಹೇಳುವ, ಒಡಪುಗಳನ್ನು ಹೇಳುವ ಕಲೆ ಅವರಿಗೆ ಕರಗತವಾಗಿದೆ. ಅಂತೆಯೇ ನಾಟಕ, ಬಯಲಾಟ, ದೊಡ್ಡಾಟ, ಸಣ್ಣಾಟ–ದಪ್ಪಿನಾಟ, ತೊಗಲು ಗೊಂಬೆಯಾಟ, ಯಾವುದೇ ಪ್ರಕಾರದ ಆಟಗಳನ್ನು ತೆಗೆದುಕೊಂಡರೂ ಆಯಾಯ ಪಾತ್ರಗಳ ಒಳಹೊಕ್ಕು ರೋಷಾವೇಶದಿಂದ ಮಾತು ಹೇಳುವ, ಹಾಡು ಹಾಡುವ, ಕುಣಿಯುವ ಗತ್ತುಗಾರಿಕೆ ಅವರದೇ ಆಗಿದೆ.

ಮಕ್ಕಳ ಆಟದ ಹಾಡುಗಳಂತೂ ಅಬಾಲವೃದ್ಧರಾದಿಯಾಗಿ

ನೆನಪಿನಾಳದಲ್ಲಿ ಉಳಿದಿರುತ್ತದೆ. ಅದಕ್ಕೆ ಕಾರಣ ಹಾಡಿನ ಗೇಯತೆ, ಭಾಷೆಯ ಸಮೃದ್ಧತೆ, ಸರಳ ಲಾಲಿತ್ಯ, ನಾಲಿಗೆಯ ಮೇಲೆ ಒಂದು ಸಾರೆ ಓಡಿದರೆ ಸಾಕು ನೆನಪಿನಂಗಳದ ಬದುಕಿನಲ್ಲಿ ನಾಟ್ಯವಾಡುತ್ತಲೆ ಇರುತ್ತದೆ. ಇದು ಜನಪದ ಸಾಹಿತ್ಯದ ಶಕ್ತಿ. ಇಲ್ಲಿ ವ್ಯಕ್ತಿಯೊಬ್ಬ ಶರೀರಧಾರಿಯಾಗಿ, ಓದು-ಬರಹದ ಮುಲಾಜಿನ ಹಂಗಿಲ್ಲದೆ ಬರಿ ನೆನಪಿನಬುತ್ತಿಯ ಮೂಲಕ ನಾಡಿನುದ್ದಗಲಕ್ಕೂ ತನ್ನ ಹಾಡಿನ ಮೋಡಿಯಿಂದ ಜನರನ್ನು ಮಂತ್ರ ಮುಗ್ಧರನ್ನಾಗಿ ಮಾಡುತ್ತಾನೆ. ಅದರಲ್ಲಿ ಯಶಸ್ವಿಯೂ ಆಗುತ್ತಾನೆ.

ಈತ ಹಾಡುವುದು-ಹಾಡಿಸುವುದು ತನ್ನ ಖುಷಿಗಾಗಿಯೇ ಹೊರತು ಮತ್ತ್ಯಾವುದಕ್ಕೂ ಅಲ್ಲ. ಗಾಳಿ ಬೀಸುವಂತೆ, ನದಿ ಹರಿಯುವಂತೆ, ಹೂ ಅರಳುವಂತೆ, ಹಕ್ಕಿ ಹಾರುವಂತೆ, ಸ್ವತಂತ್ರವಾಗಿ ಯಾರ ಹಂಗಿಲ್ಲದೆ ಹಾಡುತ್ತಲೇ ಹೋಗುತ್ತಾನೆ. ಸಮಾಜಕ್ಕೆ ಸಂಜೀವಿನಿಯಾಗುತ್ತಲೇ ಇರುತ್ತಾನೆ. ಅಲ್ಲಿ ಯಾವುದೇ ಹಣ-ಅಂತಸ್ತು, ಲಾಭ, ಪ್ರಶಸ್ತಿ, ಪದವಿ ಎಂಬ ಗೋಜಲುಗಳು ಇರುವುದಿಲ್ಲ. ಆತನ ಹಾಡಿನಂತೆಯೇ ಆತನ ಅಥವಾ ಅವರ ಬದುಕು ಸರಳ ಸುಂದರ. ಬೇಕು-ಬೇಡಗಳಿಲ್ಲ. ಬೇಕೆಂದರೆ ಸಿಗುವುದಾದರೂ ಎಲ್ಲಿ?

ಇಂತಹ ಬೇಕು ಬೇಡಗಳನ್ನು ಬದಿಗಿಟ್ಟು ಶಿವಕೊಟ್ಟ ಸನ್ನಿಯಂತೆ ಹಾಡುವವರು ಅನೇಕರು ಸಿಗುತ್ತಾರೆ. ಅಂಥವರ ಸಮೂಹದಲ್ಲಿ ಶಹಾಪುರ ತಾಲ್ಲೂಕಿನ (ಯಾದಗಿರಿ ಜಿಲ್ಲೆ) ಸೈದಾಪುರ ಗ್ರಾಮದ ಸಿದ್ದಪ್ಪ ಮೇಟಿ ಒಬ್ಬರು. ಮೂಲೆ-ಮೊಡಕಿನ ಮನೆಯೊಂದರಲ್ಲಿ ಹುಟ್ಟಿ ಬೆಳೆದ ಸಿದ್ದಪ್ಪ ಮುಂದೆ ತಾನೊಬ್ಬ 'ಮಹಾಕಾವ್ಯದ' ಹಾಡುಗಾರ ಆಗುತ್ತೇನೆ ಎಂಬ ಕಿಂಚಿತ್ತು ಸುಳಿವಿರಲಿಲ್ಲ. ಬದುಕೆಂಬೋ-ಬದುಕು ಹಾಗೆಯೇ ನಮ್ಮನ್ನು ಎತ್ತೆತ್ತಲೋ ಎಳೆದುಕೊಂಡು ಹೋಗಿ ಬಿಡುತ್ತದೆ. ನಾವು ಕಾಲದ ಕರೆಗಾಗಿ ಕಾಯುವವರು ಅಷ್ಟೇ.

<u>ಸಿದ್ದಪ್ಪ ಮೇಟಿಯ ಜನನ:</u> ಸೈದಾಪುರ ಗ್ರಾಮದ ಸಿದ್ದಪ್ಪಮೇಟಿ ಎಂಬ ಹಾಡುಗಾರ ಹುಟ್ಟಿದ್ದು ತಂದೆ ಭೀಮಪ್ಪ ತಾಯಿ ನಾಗಮ್ಮ ಎಂಬ ದಂಪತಿಗಳ ಉದರದಲ್ಲಿ. ಗ್ರಾಮ ಸೈದಾಪುರ. ಇದಕ್ಕೆ ದಿಗ್ಗಿ ಸೈದಾಪುರ

ಎಂದೂ ಕರೆಯುತ್ತಾರೆ. ಹೀಗೆ ಕರೆಯುವುದಕ್ಕೆ ಇನ್ನೊಂದು ಕಾರಣವೂ ಇದೆ. ಇದೇ ಶಹಾಪುರ ತಾಲ್ಲೂಕಿನ ಇನ್ನೊಂದು ಹಳ್ಳಿಯ ಹೆಸರು ಸಾದ್ಯಾಪುರ ಎಂದು. ಆಡುಮಾತಿನಲ್ಲಿ ಸೈದಾಪುರ-ಸಾದ್ಯಾಪುರ ಎರಡು ಒಂದೇ ಎನಿಸಿಬಿಟ್ಟು ಯಾವುದು ಎನ್ನುವ ಗೊಂದಲ ಆಗಬಾರದು ಎನ್ನುವ ಕಾರಣಕ್ಕೆ 'ಸೈದಾಪುರ' ಗ್ರಾಮಕ್ಕೆ ದಿಗ್ಗಿ ಸೈದಾಪುರ ಎಂದು ಕರೆಯುತ್ತಾರೆ. ಶಹಾಪುರದಿಂದ ಕಲುಬುರ್ಗಿಗೆ ಹೋಗುವ ದಾರಿಯಲ್ಲಿ ಶಹಾಪುರದಿಂದ ಭೀಮರಾಯನ ಗುಡಿಗೆ ಕೇವಲ ಐದು ಕಿಲೋಮೀಟರ್‌ನ ಅಂತರ. ಅಲ್ಲಿ ನಿಂತರೆ ಕಾಣುವುದೇ ದಿಗ್ಗಿ ಎಂಬ ಗ್ರಾಮ. ದಿಗ್ಗಿ ಗ್ರಾಮದಿಂದ ಎರಡು-ಮೂರು ಕಿಲೋಮೀಟರ್ ಕ್ರಮಿಸಿದರೆ ಸಿಗುವುದೇ ಸೈದಾಪುರ ಎಂಬ ಗ್ರಾಮ. ಆ ಕಾರಣಕ್ಕೆ ಈ ಗ್ರಾಮ ದಿಗ್ಗಿ ಮುಖಾಂತರ ಹಾದು ಹೋಗುವುದರಿಂದ **'ದಿಗ್ಗಿ-ಸೈದಾಪುರ'** ಎಂದು ಇಂದಿಗೂ ಜನರ ಬಾಯಲ್ಲಿ ಕರೆಯಿಸಿಕೊಳ್ಳುತ್ತದೆ.

ಗ್ರಾಮಭಾರತದ ಎಲ್ಲ ಹಳ್ಳಿಗಳಂತೆ ಈ ಹಳ್ಳಿಯೂ ಇರುವುದರಿಂದ ಅಷ್ಟೇನೂ ವಿಶೇಷತೆ ಎನಿಸುವುದಿಲ್ಲ. ನೂರು ವರ್ಷಗಳ ಹಿಂದಿನ ಈ ಹಳ್ಳಿಯನ್ನು ನೆನೆದರೆ ಹಳ್ಳಿಗೆ ಹೋಗುವುದಕ್ಕೆ ಕಾಲು ರಸ್ತೆ, ಬಹಳವಾದರೆ 'ಮಾರ್ಗ' ಎನ್ನುವ ಬಂಡಿರಸ್ತೆ ಮಾತ್ರ ಇದ್ದಿರಬೇಕು. ಅಷ್ಟನ್ನು ಬಿಟ್ಟರೆ ಬೇರೆ ಯಾವುದೇ ಸವಲತ್ತು ಈ ಹಳ್ಳಿಗೆ ಇರಲಿಲ್ಲ ಎನ್ನಿಸುತ್ತದೆ. ಅಷ್ಟೇಕೆ ನೂರು ವರ್ಷದ ನಂತರ ಇಂದು ಕೂಡ ಒಂದು ಟಾರ್ ರಸ್ತೆಯನ್ನು ಬಿಟ್ಟರೆ ಮತ್ತೇನಿಲ್ಲ. ಬಹಳವಾದರೆ ಸರಕಾರಿ ಶಾಲೆಯೊಂದು ಬಂದಿದೆ. ಉಳಿದ ಯಾವ ಸೌಲಭ್ಯಗಳು ಸೈದಾಪುರ ಗ್ರಾಮಕ್ಕೆ ಇಂದಿಗೂ ಲಭ್ಯವಿಲ್ಲ ಎನ್ನಬಹುದು. ಸುತ್ತ-ಮುತ್ತಲೂ ಉತ್ತರ-ದಕ್ಷಿಣಾಭಿಮುಖವಾಗಿ ಹಬ್ಬಿ ನಿಂತಿರುವ ಸಗರಾದ್ರಿ ಬೆಟ್ಟ. ಕಲ್ಲು-ಕ್ವಾರಿಗಳಿಂದ ತುಂಬಿರುವ ಈ ಬೆಟ್ಟದಲ್ಲಿ ಕುರುಚಲು ಗಿಡಗಂಟಿಗಳು, ತಪ್ಪಲು ಗಿಡಗಳು. ಆದರೂ ಸುತ್ತಲಿನ ಪರಿಸರವನ್ನು ನೋಡಿದರೆ ನಿಸರ್ಗದ ಮಧ್ಯೆಯೇ ನಿಂತಂತೆ ಭಾಸವಾಗುತ್ತದೆ.

ಗುಲಬರ್ಗಾದಿಂದ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ

ಮುಖ್ಯಸ್ಥರಾದ ಜಾನಪದ ವಿದ್ವಾಂಸ ಡಾ॥ ವೀರಣ್ಣ ದಂಡೆಯವರು ಮಾತನಾಡುತ್ತಾ "ಕರದಳ್ಳಿ, ಆ ಸೈದಾಪುರದ ಸಿದ್ದಪ್ಪ ಮೇಟಿಗಿಷ್ಟು ಮಾತಾಡಿಸ್ತಿಯೇನು ನೋಡು. ನೀನು ಹ್ಯಾಂಗೂ ಅಲ್ಲೆ ಸಮೀಪ ಇದ್ದಿ. ಈಗ ತಾನೇ 'ಜಾನಪದ ಶ್ರೀ' ಎನ್ನುವಂಥ ಬಹುದೊಡ್ಡ ಪ್ರಶಸ್ತಿ ಬಂದ್ಯಾದ. ಅವ್ನೂ ಖುಷಿದಾಗ ಇರತಾನ. ನೀ ಸ್ವಲ್ಪ ಮಾತಾಡಿಸಿ, ಎರಡು-ಮೂರು ಸಲ ತಿರುಗ್ಯಾಡಿ ಆತನ ಕುರಿತು ಒಂದು ಚಿಕ್ಕ ಪುಸ್ತಕ ಬರೆದುಕೊಡು" ಅಂದ್ರು.

ನನಗಂತೂ ಖುಷಿಗೆ ಎರಡು ಕಾರಣಗಳಿದ್ದವು. ಒಂದು ಆತನಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದಾಗ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಗೆಳೆಯ ಗುರುಬಸಯ್ಯ ಗದ್ದುಗೆ, ಅಂದಿನ ತಹಸೀಲದಾರರಾಗಿದ್ದ ಚವ್ಹಾಣ ನಾನು ಮತ್ತು ಕಾರ್ಯಾಲಯದ ಸಿಬ್ಬಂದಿಯೊಡಗೂಡಿ ಸನ್ಮಾನ ಮಾಡಲಿಕ್ಕೆ ತಾಲೂಕಿನ ಪರವಾಗಿ ಅವರ ಮನೆಗೆ ಹೋಗಿದ್ದೆವು. ಶಾಲು; ಹಾರ, ಸಿಹಿ ತೆಗೆದುಕೊಂಡು ಸೈದಾಪುರದ ಹಾದಿ ಹಿಡಿದು ಅವರ ಮನೆ ಕೇಳುತ್ತಾ ಮುಟ್ಟಿದಾಗ ನಾಲ್ಕಾರು ಹುಡುಗರು ಮನೆ ತೋರಿಸಲು ನಮ್ಮ ಜೊತೆಗೆ ಬಂದರು. ಅವರಿಗಂತೂ ಜೀಪಿನಿಂದಿಳಿದವರ ಜೊತೆ ಹೆಜ್ಜೆ ಹಾಕುತ್ತಿದ್ದೇವೆಂಬ ಖುಷಿ ಕಾಣುತ್ತಿತ್ತು.

ಹಳ್ಳಿಯ ಮನೆ ಒಂದು ಪಡಸಾಲೆ. ಆ ಕಡೆ, ಈ ಕಡೆ ಎದುರು ಬದುರಾಗಿ ಒಂದೊಂದು ಕೋಣೆ. ಪಡಸಾಲೆಗೆ ಹೊಂದಿಕೊಂಡಂತೆ ಹಿಂದೆರೆಡು ಚಿಕ್ಕ ಕೋಣೆಗಳು. ಪಡಸಾಲೆಯಲ್ಲಿ ಹಳ್ಳಿಯ ವಾತಾವರಣದಂತೆ ಕೃಷಿಯ ಸಲಕರಣೆಗಳು ಬಿದ್ದಿದ್ದವು. ನಾವು ಬಂದಿದ್ದನ್ನು ನೋಡಿ ಗಡಬಡಿಸಿ ನಿಂತರು. ಇವರು ನಮ್ಮವರಲ್ಲ. ನಮ್ಮಲ್ಲಿಗೇಕೆ ಬಂದರು? ಎಂಬ ಅನುಮಾನದ ಪ್ರಶ್ನೆ ಕಾಡುವ ಮುನ್ನವೇ ನಮ್ಮವರಲ್ಲಿ ಯಾರೋ ಒಬ್ಬರು 'ಸಿದ್ದಪ್ಪ ಮೇಟಿ ಎಲ್ಲಿ?' ಎಂದರು. ಆತನ ಹೆಂಡತಿ ಬಂದಳು. "ಇಲ್ಲೆಪ್ಪ ಇಲ್ಲೆ ಎಲ್ಲೊ ಹೋಗ್ತೀನಿ ಅಂತ ಹೋಗ್ಯಾನ" ಎಂದು ಹೇಳಿದಳು.

ನಮಗೆ ನಿರಾಶೆಯಾಯಿತು. "ರಾಜ್ಯೋತ್ಸವ ಪ್ರಶಸ್ತಿ" ಸಿದ್ದಪ್ಪ ಮೇಟಿಗೆ ಬಂದಿದ್ದರೂ, ಅದು ನಮಗೆ ಬಂದಷ್ಟು ಖುಷಿಯಲ್ಲಿ ನಾವು ಹೋದುದಾಗಿತ್ತು: ಏನು ಮಾಡಬೇಕು ಎಂದು ತೋಚದಾದಾಗ ಮೇಟಿಯವರ ಹೆಂಡತಿಯನ್ನೇ ಒಂದು ಕುರ್ಚಿಯಲ್ಲಿ ಕೂಡಿಸಿ ಶಾಲು, ಹಾರ, ಸಿಹಿ ಕೊಟ್ಟು ನಿಮ್ಮ ಗಂಡನಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿದೆ ಬೆಂಗಳೂರಿಗೆ ಹೋಗಬೇಕು. ಇವರು ತಹಸೀಲದಾರರು ಎಂದು ಹೇಳಿಕೊಂಡೆವು.

ಪಾಪ! ಆ ಹೆಣ್ಣುಮಗಳಿಗೇನು ಗೊತ್ತು. ಪ್ರಶಸ್ತಿ, ಫಲಕ, ಹಣ ಎಂಬುದೇ ಗೊತ್ತಿಲ್ಲದ ಮುಗ್ಧ ಜೀವಿ. ನಿರ್ಭಾವುಕಳಾಗಿ ಕುಳಿತು ನಾವು ಕೊಟ್ಟ ಸನ್ಮಾನವನ್ನು ಪಡೆದುಕೊಂಡಳು. ಬಂದ ಮೇಲೆ ತಹಸೀಲದಾರರ ಆಫೀಸಿಗೆ ಬರಲಿಕ್ಕೆ ಹೇಳು ಎಂದು ಬಂದಿದ್ದೆವು. ನಂತರದಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ಸಿದ್ದಪ್ಪ ಮೇಟಿಯವರು ಪಡೆದುಕೊಂಡು ಬಂದಿದ್ದರು. ಸಂತಸದ ಬೆಳದಿಂಗಳು ಸೈದಾಪುರದ ತುಂಬ ಪಸರಿಸಿತ್ತು.

ಈಗ ಮತ್ತೆ ಅಂಥದೇ ಖುಷಿ ನನಗಾಗಿತ್ತು. ಅವರು ಪಡೆದ "ಜಾನಪದ ಸಿರಿ" ಪ್ರಶಸ್ತಿ ಬಹು ದೊಡ್ಡದು. ಆ ಪ್ರಶಸ್ತಿ ಎಂದರೆ "ಜೀವಮಾನದ ಸಾಧನೆ" ಎಂದೇ ಪರಿಭಾವಿಸಬೇಕು. ಪತ್ರಿಕೆಯಲ್ಲಿಯ ವರದಿ ನೋಡಿ ದಂಡೆಯವರಿಗೆ ಫೋನಾಯಿಸಿದ್ದೆ. ಅಂತೂ-ಇಂತೂ ನಮ್ಮೂರಿನ ಗಾಯಕನಿಗೆ ನೀವು ಪ್ರಶಸ್ತಿ ಕೊಡಿಸಿಬಿಟ್ರಿ ಎಂದಾಗ, ಪಾಪ! ಅವ್ನಿಗಿ ಸಿಗಬೇಕು, ಸಿಕ್ಕಾದ. ಜೀವಮಾನ ಪೂರ ಹಾಲುಮತ ಕಾವ್ಯವನ್ನೇ ಹಾಡುತ್ತಾ ಜೀವ ಸವಸ್ಯಾನ. ಇಳಿ ಹೊತ್ತಿನ್ಯಾಗ ಪ್ರಶಸ್ತಿ ಮತ್ತು ಮೊತ್ತ ಆತನ ಜೇಬಿಗೀಟು ಆಸರ ಆಗ್ತದ ಎಂದಿದ್ದರು.

ಲಿಂಗಣ್ಣ ಸತ್ಯಂಪೇಟೆಯವರನ್ನು ಪರಿಚಯಿಸಿ ಬರೆದ ಪುಸ್ತಕಕ್ಕೆ ಬೆನ್ನುಡಿ ಬರೆಯಲು ಅವರಿಗೆ ಹಸ್ತಪ್ರತಿ ಕೊಟ್ಟಿದ್ದೆ. ಒಂದೇ ಬೈಠಕ್‌ನಲ್ಲಿ ಬೆನ್ನುಡಿ ಬರೆದುಕೊಟ್ಟು ಬೆನ್ನು ಚಪ್ಪರಿಸಿದ್ದರು. ಯಾವುದೋ ಸಂದರ್ಭದಾಗ ಮಾತನಾಡಿದ ಹೊತ್ತಿನಲ್ಲಿ ಆ ಸಿದ್ದಪ್ಪನ ಬಗ್ಗೆ ಒಂದು

ಚಿಕ್ಕ ಪುಸ್ತಕ "ಜಾನಪದ ಪರಿಷತ್ತಿಗಿ" ಹೇಳಿಬಂದೀನಿ ಅಂದಿದ್ರು. ನಾನೂ ಹ್ಞೂಂ ಅಂದಿದ್ದೆ. ಎಲ್ಲದಕ್ಕೂ ಹ್ಞೂಂಗುಟ್ಟುವ ಬುದ್ಧಿ ನನ್ನದು.

ಆಯ್ತು ಎಂದುಕೊಂಡು ನಮ್ಮ ಸಹೋದ್ಯೋಗಿ ಶಿವಲಿಂಗಪ್ಪ ಸುರಪುರ ಅವರೊಡನೆ ಸಿದ್ದಪ್ಪನ ಭೇಟಿಗೆ ಹೋಗೋಣ ಎಂದಿದ್ದೆ. ಆಯ್ತು ತಗೋರಿ ಹೋಗಮ್ಮು ಎಂದಿದ್ದ. ಹೀಗೆ ತಿಂಗಳೊಪ್ಪತ್ತು ಕಳೆದಿರಬೇಕು. ಒಂದು ದಿನ ರವಿವಾರ ಶಿವಲಿಂಗಪ್ಪನಿಗೆ ಫೋನಾಯಿಸಿದಾಗ ಆಯ್ತು ಸರ್ ಹೋಗಮ್ಮು ಅಂದಿದ್ದ. ನಾನು ಶಿವಲಿಂಗಪ್ಪ ಮಲ್ಲಿಕಾರ್ಜುನ ಕರಿಗುಡ್ಡ ಎನ್ನುವ ವಕೀಲರೊಬ್ಬರ ಜೊತೆಗೆ ಸೈದಾಪೂರದ ಹಾದಿ ಹಿಡಿದೆವು. ಅದು ಲಗ್ನದ ಸೀಝುನ ಬೇರೆ ಆಗಿತ್ತು. ಫೋನ್ ನಂಬರ್ ಬೇರೆ ಇರಲಿಲ್ಲ. ಲಗ್ನಕ್ಕ ಹೋಗಿರತನ ಏನ್ರಿ ಎಂದು ಅನುಮಾನಿಸುತ್ಲೇ ಸೈದಾಪುರ ಮುಟ್ಟಿದೆವು. ಹತ್ತಾರು ವರ್ಷಗಳ ಹಿಂದೆ ಸಂದಿ-ಗೊಂದಿ ಹಾಯ್ದು ಹೋಗಿದ್ದೇವಾದರೂ ಇಂದು ಅದೇ ಸ್ಥಿತಿ. ಏನೂ ಬದಲಾವಣೆ ಆಗಿಲ್ಲ. ಜೊತೆಗೆ ಸಿದ್ದಪ್ಪ, ಸಿದ್ದಪ್ಪನ ಮನೆ ಕೂಡ.

ಸಿದ್ದಪ್ಪ ಮನೆಯಂಗಳದ ಗಿಡದ ನೆರಳಿನಲ್ಲಿ ಕುಳಿತಿದ್ದ. ಯಾರೊಡನೆಯೋ ಮಾತಿನಲ್ಲಿ ತೊಡಗಿದ್ದ. ಆನ್ರಿ ಎಂದು ಶಿವಲಿಂಗಪ್ಪ ಸಂತಸದ ನಗೆ ಬೀರಿದ್ದ. ಬಂದ ವಿಷಯವನ್ನು ತಿಳಿಸಿ ಮಾತನಾಡಬೇಕು ಎಂದಾಗ ಆಯ್ತು ಆಯ್ತು ಬರ್ರಿ ಎಂದು ಕರೆಯುತ್ತಾ ಪಡಸಾಲೆಗೆ ಹೋಗಿ ಕುಳಿತೆವು. ದಂಡೆಯವರ ಹೆಸರನ್ನು ಹೇಳಿದೆ. ಅವರೇ ನಿಮ್ಮನ್ನು ಕುರಿತು ಚಿಕ್ಕ ಪುಸ್ತಕ ಬರೆದುಕೊಡಲು ಹೇಳಿದ್ದಾರೆ. ಅದಕ್ಕೆ ಬಂದೀನಿ ಅಂದೆ.

ಮಾತು ಆರಂಭ ಮಾಡಿದೆವು. ಬಾಲ್ಯದ ವಿಚಾರಗಳನ್ನು ಕೇಳತೊಡಗಿದಂತೆ ಶಿವಲಿಂಗಪ್ಪ ಸರ್ ಅವರ ಊರಾದ ನಾಗನಟಗಿಗೆ ಹೋಗಿ ಬರುತ್ತೇನೆಂದು ಹೋದರು.

ಸಿದ್ದಪ್ಪನನ್ನು ಮಾತಾಡಿಸಿ ಯಾಕ, ಏನು? ಎಲ್ಲಿಗನಾ ಹೊಂಟಿದ್ರೇನು ಎಂದು ಕೇಳಿದೆ. ಹೌದು. ಲಗ್ನ ಅವಾ ಎಂದರು. ಮನುಷ್ಯ

ಸ್ವಲ್ಪ ನಿಸ್ತೇಜನಂತೆ ಕಂಡ. ಆದರೂ ಕಣ್ಣಿಗೆ ಚಸ್ಮಾ ಇರಲಿಲ್ಲ. ಗಟ್ಟಿ ಮುಟ್ಟಾಗಿದ್ದಾನೆ. ಸರಳವಾಗಿ ಮಾತಾಡ್ತಾನೆ. ನೆನಪಿನ ಶಕ್ತಿ ದೊಡ್ಡದಿದೆ.

ನನ್ನ ಊಟ ಪಾಡಿಲ್ಲ. ಡಾಕ್ಟರರ ಹತ್ತಿರ ಹ್ವಾದ್ರ ಉರಿ ಬಂದಾವಲ್ಲೋ ಅಂದ್ರು. ಉರಿ ಬಂದದ್ದು ನನ್ಗೇ ಗೊತ್ತೇ ಆಗಿಲ್ಲ. ಊಟ ಪಾಡಿಲ್ಲ (ಅಂದ್ರೆ ರುಚಿ ಹತ್ತುತ್ತಾ ಇಲ್ಲ) ಅಷ್ಟೇ ನನ್ಗ ಗೊತ್ತು ಎಂದು ಹೇಳಿದ. ಆತನ ಬಾಲ್ಯದ ಬುತ್ತಿಯನ್ನು ಬಿಚ್ಚಲು ನಾನು ಪ್ರಯತ್ನಿಸತೊಡಗಿದೆ.

ನಿಮ್ಮ ಊರಾಗ ಸಾಲಿ ಇತ್ತೇನು?
ನೀನು ಸಾಲಿ ಕಲ್ತಿದ್ದೇನು?
ಓದ್ಯಾಕ ಬರಿಯಾಕ ಬರ್ತದೇನು?

ಎಂದು ಕೇಳಿದಾಗ ಊರ್‍ಯಾಗ ಎಲ್ಲಿ ಸಾಲೀರಿ. ನಮ್ ಆಚೀಮನ್ಯಾಗ ಸಾಲಿ ಅಂತ ನಡೀತಿತ್ತು. ಇದೇ ಊರಿನ ಹರಿಜನ ಸಂಗಪ್ಪ ಮಾಸ್ತರ ಅಂತ ಇದ್ದ. ಶಹಾಪುರದಿಂದ ಬರ್ತಿದ್ದ. ಅದು ರಾತ್ರಿ ಹೊತ್ತು ಸಾಲೀರಿ. ಹಗಲೆಲ್ಲಾ ದುಡ್ಯಾಕ ಹೋಗೋರು. ಸಾಲಿ ಯಾರು ಕಲೀಬೇಕು? ಯಾಕ ಕಲಿಬೇಕು ಅನ್ನೋ ಕಾಲ? ದೀಪದ ಬುಡ್ಡೀಗಿ ಗ್ಯಾಸಲೇಟೆಣ್ಣೆ ಹಾಕಿ ಬೆಳಕ ಮಾಡಕಂತಿದ್ದೀವಿ. ಅವ್ನೆ ನಾಕಕ್ಷರ ಕಲಸಾಂವ. ಎಂಟ್ಹತ್ತು ಹುಡುಗರ್‍ರು ಹೋಗ್ತಿದ್ದೀವಿ. ಏನ್ ಕಲತೀವೋ ಏನೋ? ಯಾರು ಕಲ್ತರು ಬಾವನ್ನ ಅಕ್ಷರ. ಒಂಭತ್ತು ಅಂಕಿ. ಅಂಕಿ ಮುಂದೆ ಪೂಜಿ ಇಟ್ಕೊಂತ ಹ್ವಾದ್ರು ಕೋಟಿ ಆಗ್ತದ. ಇಟೇ ಅಲ್ಲ ಎಂದು ಓದಿನ ಕುರಿತು ಹೇಳಿದ.

ಸಾಲಿ ಕಲಿಲ್ಯಾಕ ಹಚ್ಚೋದು ಅಂದ್ರ ಮನ್ಯಾಗನವರೀಗಿ ಒಂದು ಭುಗಿಲಿತ್ತು. ಕಲಿಲ್ಯಾಕಂತ ಕಳಿಸಿದೀವಿ. ಏನ್ಯಾರ ಆಗಿ ಕೆಟ್ರು ಏನ್ ಮಾಡ್ಬೇಕು ಎಂಬ ಅಂಜಿಕೆ ಬೇರೆ ಎಂಬುದನ್ನು ಆಗಿನ ದಿನಮಾನದ ಸಂದರ್ಭವನ್ನು ಹೇಳಿದ

ಯಪ್ಪ ನಾ ಸಹಿ ಮಾಡ್ತೀನಿ.

ಇನ್ನೂ ಚಸ್ಮಾ ಇಟ್ಟಿಲ್ಲ. ನೂರು ಪೂರಾ ಆಗ್ಯಾದ ಎಂದು ಹೇಳ್ತಾ ಚಸ್ಮಾ ನಮ್ಗ ಯಾಕ ಬೇಕ್ರಿ. ಏನ್ ಓದವ್ರ-ಬರ್‍ಯಾವ್ರ. ನಾಕಕ್ಷರ ನೋಡಬೇಕ ಏನಿಲ್ಲ. ಕಣ್ಣು ಮಂಜು ಆಗ್ಯಾವ. ಹೋಗೋರು ಬರೋರು ಕಾಣ್ತಾರ ಅಷ್ಟು ಸಾಕು. ನಮಗ್ಯಾಕ ಚಸ್ಮಾ ಎಂದು ಹೇಳುತ್ತಿದ್ದಂತೆ ಮಗ ಶಿವಗೇನಪ್ಪ ಏನೋ ಹೇಳಲು ಸುರು ಮಾಡಿದ. ಯಾರೋ ಮನೀಗಿ ಬಂದಾರ ಅಂಬೋ ಸುದ್ದಿ ತಿಳಿದ ಸಿದ್ದಪ್ಪನ ಮೊಮ್ಮಗ ಬಂದು ನಿಂತ. ಯಾರೀತ ಅಂದೆ. ನಮ್ಮ ಮೊಮ್ಮಗ ಶಿವಗೇನಪ್ಪನ ಮಗ ಎಂದೇಳಿದ. ಹುಡುಗ ಮ್ಯಾಟ್ರಿಕ್ ಓದುತ್ತಿದ್ದಾನೆ ಎಂಬ ಸಂಗತಿ ಮಾತಿನ ನಡುವೆ ಗೊತ್ತಾಯಿತು.

ನನ್ಗ ನಾಕು ಭಾಷಾ ಬರ್‍ತಾವ ಅಂದ. ಓಹೋ ಪರವಾ ಇಲ್ಲ ಎಂದೆ. ಭಾಷಾ ತಿಳುವಳಿಕೆಯೇ ಮುಖ್ಯ. ಓದೋದು, ಬರೆಯೋದು, ಎರಡನೇ ಹಂತ. ಯಾವ ರಾಜ್ಯಕ್ಕ ಹ್ವಾದ್ರು ಪಾರಾಗಿ ಬರ್ತೀವಿ ಎನ್ನುತ್ತಲೇ ಕನ್ನಡ, ಉರ್ದು, ಮರಾಠಿ, ತೆಲುಗು ಎಂದೇಳಿದ. ಒಬ್ಬ ಅನಕ್ಷರಸ್ಥ ತನ್ನ ಬದುಕಿನ ಬಡಿದಾಟದ ನಡುವೆ ದುಡಿಮೆಗೆಂದು ಹೋದಾಗ ಅಲ್ಲಿಯ ಭಾಷೆಯನ್ನು ಅರಗಿಸಿಕೊಂಡು ವ್ಯವಹಾರಕ್ಕೆ ಬೇಕಾದಷ್ಟು ಭಾಷೆ ಆತನಿಗೆ ನಿರರ್ಗಳವಾಗಿ ಬರುತ್ತದೆ ಎನ್ನುವ ಸಂಗತಿಯೇ ಸಂತಸ ತರುವಂಥದ್ದು.

ದಂಡೆ ಸಾಬ್ರು ನನ ಕಡಿಲಿಂದ ಹಾಡಿಸಿ ಪುಸ್ತಕ ಬರೆದರು. ಅದೇನು ಬಿಡುಗಡೆ ಅಂತಲ್ರಿ. ನನಗೂ ಬರಾಕ ಹೇಳಿದ್ರು. ನಾನು ಹೋಗಿದ್ದೆ. ಬುಕ್ ಕೋಲ್ಯಾನ (ಬಹಳಷ್ಟು) ಮಂದಿ ತಗೊಂಡ್ರು. ಪುಸ್ತಕ ಒಯ್ದರು ಎಂದು ಪುಸ್ತಕ ಬಿಡುಗಡೆಯ ಸಂಗತಿಯನ್ನು ನೆನಸಿಕೊಂಡ. ಆದರೇನು, ಓದಲು-ಬರೆಯಲು ಬರುವುದಿಲ್ಲ. ಅಲ್ಲಿಯ ಸಂದರ್ಭವನ್ನು ಮನಸ್ವೀ ಅನುಭವಿಸಬೇಕು ಅಷ್ಟೆ. ಅದರಾಗ ಏನ್ ಬರದಾರ ಅಂಬೋದು ದಂಡೆ ಸಾಬ್ರಿಗೆ ಗೊತ್ತು. ತಗೊಂಡು ಓದೋವ್ರಿಗೆ ಗೊತ್ತು. ಆದ್ರ ನಾ ಏನ ಹಾಡ ಹಾಡಿದ್ದೆ ಅದು ಅದರಾಗ ಪ್ರಿಂಟಾಗ್ಯಾದ ಎಂಬುದು ನನಗೆ ತಿಳೀತು. ಪುಸ್ತಕ ಜನಾ ಒಯ್ಯೋದು ನೋಡಿ ನನ್ಗ ಗಾಬರಿ ಆಯ್ತು.

ನಮ್ಮ "ಹಾಲುಮತ ಕಾವ್ಯ" ಅಷ್ಟು ಶ್ರೇಷ್ಠ ಅದಾ. ನಾ ಈಸುದಿನ ಹಾಡ್ಕೋತ ಬಂದದಕ್ಕೆ ಒಂದು ಬೆಲಿ ಬಂತು ಅನ್ನಿಸಿತು. ದೊಡ್ಡ ದೊಡ್ಡೋರೆಲ್ಲ ಬಂದಿದ್ರು. ಭಾಳ ಮಂದಿ ಜಮಾಯಿಸಿದ್ರು ಎಂದು ಅಂದಿನ ಸಂಗತಿಯನ್ನು ನೆನಸಿಕೊಂಡ.

ಕಮಸೇ ಕಮ ಅರವತ್ನಾಲ್ಕು ಕ್ಯಾಸೆಟ್ ತುಂಬದ್ರು. ಒಂದು ನೂರು ತಾಸು ಕಾವ್ಯವನ್ನು ಹಾಡಿದೆ. ಇನ್ನೂ ಅದಂತ ಹೇಳ್ದೆ. ಕಾಗ್ದ ಇಲ್ಲ, ಪತ್ರ ಇಲ್ಲ ಮತ್ತು ಸೈದಾಪುರದ ಸಿದ್ದಪ್ಪ ಸಣ್ಣ ಗಡಿ ಅಲ್ಲ. ಇನ್ನೂ ಆದಂತಂದ್ರ ಮುಂದೇನಾದೋ ಸುಮ್ಮ ಕೂಡು ಅಂದ್ರು.

ಹಾಲುಮತ ಮಹಾಕಾವ್ಯ ಏನಿಲ್ಲೆಂದರೂ ಡೆಮ್ಮಿ ೧/೮ ಆಕಾರದಲ್ಲಿ ಎಂಟು ನೂರು ಪುಟವಿದೆ. ಅಂದ್ರೆ ನೆನಪಿನ ಅಗಾಧಶಕ್ತಿಗೆ ನಾನು ಬೆರಗಾಗಿ ಹೋದೆ. ಪುಸ್ತಕವನ್ನು ನಾನು ನೋಡಿರಲಿಲ್ಲ. ಪುಸ್ತಕ ಅದಾ ಏನ್ ಅಂದಾಗ ಶಿವಗೇನಪ್ಪ ಪುಸ್ತಕ ತಂದು ಕೊಟ್ಟ.

"ಜನಪದ ಹಾಲುಮತ ಕಾವ್ಯ" ಎಂಬ ಶಿರೋನಾಮೆಯಡಿಯಲ್ಲಿ ಸಿದ್ದಪ್ಪ ಮೇಟಿಯ ಭಾವಚಿತ್ರದೊಂದಿಗೆ, ಜಾನಪದ ಚಿತ್ರದೊಂದಿಗೆ ಅಂದವಾಗಿ ಮುದ್ರಣಗೊಂಡಿದೆ. ೧೩೨ ಪುಟಗಳ ದೀರ್ಘ ಪ್ರಸ್ತಾವನೆ ಜನಪದ ಹಾಲುಮತ ಮಹಾಕಾವ್ಯಕ್ಕಿದೆ. ಇಡೀ ಪ್ರಸ್ತಾವನೆಯನ್ನು ಓದಿದಾಗ ಕಾವ್ಯದುದ್ದಕ್ಕೂ ಹರಿದುಕೊಂಡು ಬರುವ ಪಾತ್ರಗಳು, ಕಥೆಗಳು, ದೇವತೆಗಳು, ಮಹಾಮಹಿಮರು, ಘಟನೆಗಳು ನಮ್ಮ ಕಣ್ಮುಂದೆ ದೃಶ್ಯಕಾವ್ಯವಾಗಿ ಅದ್ಭುತ ಲೋಕಕ್ಕೆ ಕರೆದೊಯ್ಯುತ್ತದೆ. ಪ್ರಸ್ತಾವನೆಯಲ್ಲಿ ಡಾ॥ವೀರಣ್ಣ ದಂಡೆಯವರ ವಿದ್ವತ್ ಪ್ರತಿಭೆ, ತಾರ್ಕಿಕ ಶಕ್ತಿ, ಸಂಪಾದಕನ ಜಾಣ್ಮೆ, ಸಮಯದ ತಾಳ್ಮೆ ವ್ಯಕ್ತವಾಗುತ್ತದೆ. "ಜನಪದ ಹಾಲುಮತ ಪುರಾಣ" ಅದ್ಭುತ ಸಂಗ್ರಹವಾಗಿ ಮುಂದಿನ ತಲೆಮಾರುಗಳಿಗೆ ತವನಿಧಿಯಾಗಿ ಸಂಪಾದಿಸಿದ್ದು ಸಾರ್ಥಕ ಕೆಲಸ ಎನಿಸಿದೆ. ಅನುಬಂಧ-೧ ರಲ್ಲಿ ಹಾಡುಗಾರರ ವಿವರಗಳು, ತಂಡದ ಇಡೀ ಮಾಹಿತಿ. ಸಿದ್ದಪ್ಪ ಮೇಟಿಯ ಜೊತೆ ಜೊತೆ ಹಾಡುಗಾರರಾದ ಆತನ ಮಗ ಶಿವಗೇನಿ ಸಿದ್ದಪ್ಪ ಮೇಟಿ. ಹಿಮ್ಮೇಳದಲ್ಲಿ ಬರುವ ಸದಸ್ಯರು

ಏಳು. ಅವರ ಹೆಸರುಗಳನ್ನು ದಾಖಲಿಸಿದ್ದರು. ಮುಖ್ಯ ಹಾಡುಗಾರನ ಜೊತೆ ಇಡೀ ತಂಡದ ಸದಸ್ಯರು ಹಾಡುಗಾರಿಕೆಯಲ್ಲಿ ಭಾಗಿಯಾಗುತ್ತಾರೆ. ಅಲ್ಲೊಂದು ಹೊಸಲೋಕವೆ ಇಳಿದು ಬಂದಂತಾಗುತ್ತದೆ. ಅನುಬಂಧ-೨ ರಲ್ಲಿ ಕಾವ್ಯದಲ್ಲಿ ಬರುವ ಫುರುಷ ಪಾತ್ರಗಳು ೨೦. ಸ್ತ್ರೀ ಪಾತ್ರಗಳು ೧೭. ಅನುಬಂಧ-೩ ರಲ್ಲಿ ಬರುವ ಪ್ರಮುಖ ಊರುಗಳು, ಸ್ಥಳಗಳು ೪೦. ಒಂಭತ್ತು ಮಠಗಳು. ಆಯಿ ಲಿಂಗಮ್ಮನ ಉಡಿಯಲ್ಲಿ ಬಂದ ಲಿಂಗಗಳು ಮತ್ತು ಅವು ನೆನೆದ ಊರುಗಳು ಏಳು, ಇವೆ. ಅನುಬಂಧ-೪ರಲ್ಲಿ ಶಬ್ದಾರ್ಥಗಳನ್ನು (ಜಾನಪದಗಳ ಅರ್ಥ) ೫ ಪುಟಗಳಲ್ಲಿ ವಿವರಿಸಿ. ಶಾಸ್ತ್ರೀಯವಾಗಿ ಮಹಾಕಾವ್ಯವನ್ನು ಶ್ರವ್ಯ ಮೌಖಿಕ ಪರಂಪರೆಯಿಂದ ಲಿಖಿತ ರೂಪದಲ್ಲಿ ದಾಖಲಿಸಿ ಮಹದುಪಕಾರ ಮಾಡಿದ್ದಾರೆ ಡಾ.ವೀರಣ್ಣ ದಂಡೆಯವರು. ಕಾಲಗರ್ಭದಲ್ಲಿ ಸಿದ್ದಪ್ಪ ಮೇಟಿ ಮತ್ತು ಸಂಗಡಿಗರೊಂದಿಗೆ ಕಳೆದು ಹೋಗಬಹುದಾಗಿದ್ದ ಮಹಾಕಾವ್ಯವೊಂದು ಲಿಖಿತರೂಪವಾಗಿ ಮುದ್ರಣವಾದದ್ದು ಸಾಹಿತ್ಯ ಲೋಕಕ್ಕೆ ಬಹುದೊಡ್ಡ ಕೊಡುಗೆಯೆಂದೇ ಹೇಳಬಹುದು.

ಇದು "ಜನಪದ ಹಾಲುಮತ ಮಹಾಕಾವ್ಯ" ಹೊರನೋಟ. ಪುಸ್ತಕ ನೋಡಿದಾಕ್ಷಣ ಬಂದ ಭಾವವಿದು. ಒಂದೇ ಬೈಠಕ್‌ನಲ್ಲೇ ಆಗಲಿ ಬಾಕಿವೊಪ್ಪತ್ತಿನಲ್ಲೇ ಆಗಲಿ ಓದಿ ಮುಗಿಸಲು ಸಾಧ್ಯವಾಗದ ಕಾವ್ಯ. ಇಂತಹ ಕಾವ್ಯವನ್ನು ಹಾಡಿಸಿ, ರೆಕಾರ್ಡಿಂಗ್ ಮಾಡಿ ಬರಹ ರೂಪಕ್ಕಿಳಿಸಿದ್ದು ಪವಾಡವಾಗಿಯೇ ಕಾಣಿಸುತ್ತದೆ. ಕಾವ್ಯದ ಕುರಿತು ಸದ್ಯಕ್ಕೆ ಈ ಮಾತನ್ನು ಇಲ್ಲಿಗೆ ನಿಲ್ಲಿಸಿ, ಸಾಧ್ಯವಾದರೆ ಮುಂದೆ ಚರ್ಚಿಸುತ್ತೇನೆ.

ಇಂತಹ ಮಹಾಕಾವ್ಯವನ್ನು ಹೇಗೆ ನೆನಪಿಟ್ಟುಕೊಂಡಿ?
ಇದನ್ನು ಕಲಿಸಿದವರು ಯಾರು? ಗುರುವೇನಾದರೂ
ಇದ್ದಾರೆಯೆ?

ಎಂಬ ಪ್ರಶ್ನೋಪಪ್ರಶ್ನೆಗಳಿಗೆ ಸಹಜವಾಗಿ ಉಸಿರಾಡುವಂತೆ ಮಾತನಾಡಲು ಸುರು ಮಾಡಿದರು.

ಇದ್ರಾಗ ನಮ್ದಂತ ಪುಸ್ತಕದಾಗಿಂದಲ್ರಿ. ದೇವಲೋಕದ ಸುದ್ದೀನ

ನಾವ್ ಹೇಳ್ತಿವಿ. ನಮ್ಮ ಕಥೀ ಸುರುವಾಗೋದು ಮ್ಯಾಲಿಂದ. ಈ ಕಾವ್ಯದ ಹಾಡಿಗೆ ಕಾಗ್ದ, ಪತ್ರ-ಪಳ್ಳಿ, ಸಾಕ್ಷಿ ಅಂತ ಏನ್ ಇಲ್ರಿ. ನಮ್ಗೇನು ಜಮೀನ ಇಲ್ರಿ. ಕೂಲಿ ಕೆಲಸದಾ ಮ್ಯಾಲೇನೇ ನಮ್ಮ ಉಪ ಜೀವನ; 'ಪೊಲೀಸ್ ಆಕ್ಷನ್' ನನ್ಗೆ ಚೆನ್ನಾಗಿ ಗೊತ್ತಾsದ, ನೆನಪಾದ. ನನ್ಗ ಇಪ್ಪತ್ತೈದು ಮೂವತ್ತು-ಮೂವತ್ತೈದು ಆಸು-ಪಾಸು ಇರ್ಬೇಕು. ಎಕ್ಕಾವನರಾಗ (೫೧ರಲ್ಲಿ) ಮದ್ವಿ ಆಯ್ತು. ಮದ್ವಿಗೆ ಮುಂಚೆ ಚಬ್ಬೆಚಾಳೀಸ್ ಇಸ್ವಿನಾಗ (೪೪ರಲ್ಲಿ) ಸೋಲಾಪುರದ 'ಜಾ-ಮಿಲ್'ನಲ್ಲಿ .ಕೆಲಸ ಮಾಡುತ್ತಿದ್ದೆ. ವಸತಿ ಬಾಳಿ ಟೇಸನ್ನ. ಪಾನಮೊಳ. (ಮೊಳ ಅಂದ್ರೆ ಮರಾಠಿ ಭಾಷೆಯಲ್ಲಿ ತೋಟ ಪಟ್ಟಿ) ಅಲ್ಲೆ ಇದ್ದೀವಿ. ಹೊಟ್ಟೆ ಉಪಜೀವನಕ್ಕಾಗಿ ನಮ್ಮ ಭಾಗದ ಜನ ಇಂದೂ ಕೂಡಾ ಸೊಲ್ಲಾಪುರ, ಪುಣೆ, ಬೊಂಬಾಯಿ, ಬೆಂಗಳೂರು ಅಂತ ಹೋಗ್ತಾರ.

<u>ನನ್ನ ಗುರು:</u> ಯಾವಾಗ ನನ್ನ ಹೊಟ್ಟಿ ತಿಪ್ಪಲೀಗಿ ನಾ ಸೊಲ್ಲಾಪುರದ 'ಜಾ-ಮಿಲ್' ಸೇರಿದೆ. ಅಲ್ಲಿ ನನ್ನಂಥ ನೂರಾರು ಜನ ದುಡ್ಯೋರು ಇದ್ರು. ಇಂಥ ಅನೇಕರಲ್ಲಿ ನನ್ನದೇ ಜಾತಿಯ ಕುರುಬರ ಕುಲದಾತ ಸಾಯಬಣ್ಣ ತಂದೆ ಕಲ್ಲಪ್ಪ ಬಾಗ್ಮೋಡಿ. ಆತನ ಊರು ಕುದುರಿ-ಕುನ್ನೂರು. ಇಂಡಿ ತಾಲೂಕಾ ಬಿಜಾಪುರ ಜಿಲ್ಲೆ. ಇದು ಏನಿಲ್ಲೆಂದರೂ ಹನ್ನೆರಡನೇ ಶತಮಾನದ ಹಾಡಿನ ಕಥಿ. ನಾವು ವಾಸವಿರುವ ಪಾನಮೊಳದಿಂದ 'ಜಾಮಿಲ್' ಏನಿಲ್ಲೆಂದರೂ ಎಂಟ್ಹತ್ತು ಕಿಲೋಮೀಟರ್‌ಗಳ ದೂರದ ದಾರಿ ಫ್ಯಾಕ್ಟರಿಗೆ.

ಫ್ಯಾಕ್ಟರ್‍ಯಾಗ ಏನೇನು ಕೆಲಸ ಮಾಡ್ತಿದ್ರಿ ಅಂದ್ರ. ನೋಡ್ರಿ ಸಾಬ್ರೆ. ನಾ ಒಂದೇ ಕೆಲ್ಸಂತ ಅಲ್ಲ. ಮುನ್ನೂರ ಅರವತ್ತು ಸೂಜಿ ಇರತಾವ. ಇದಕ್ಕ 'ತ್ರಾಸ' ಅಂತಾರ. ನಾನು ಡಬ್ಲಿಂಗನಾಗಿದ್ದೆ. ದಪ್ಪನ್ನ ನೂಲು ತಯಾರು ಮಾಡ್ತಿದ್ದೀವಿ. ಎರಡು ವರ್ಷ ಖಾಯಂ ಆಗಿ ಕೆಲಸ ಮಾಡೀನಿ. ಬೇರೆ ಬೇರೆ ಕಪಡ ಸಾಚಾಗಳು, ವೈಖಾತಾ, ಗಡಿ ಖಾತಾ, ಡಬ್ಲಿಂಗ್, ತ್ರಾಸನ್ನ, ರುವಿನ್, ಎಂಟರ್ ಈ ಎಲ್ಲಾ ಕೆಲಸಗಳನ್ನು ಮಾಡ್ತಿದ್ದೆ. ಪಗಾರ ಫಿಕ್ಸ್ ಇತ್ತು. ಪಂದ್ರಾವೀಸ್ ಇರ್ಬೇಕು. (ಹದಿನೈದು / ಇಪ್ಪತ್ತು) ಮಂಗಾಯಿ

(ತುಟ್ಟಿ ಭತ್ಯೆ) ಅದೂ ಇದೂ ಕಲ್ತು, ಶಂಬೋರು ರೂಪಾಯಿ ಬರ್ತಿತ್ತು.

ಊಟಕ್ಕ ಹ್ಯಾಂಗ್ ಅಂದ್ರ ಸ್ವಂತ ಕೈಲೇ ಮಾಡ್ಕೋತಿದ್ದೆ. ರೊಟ್ಟಿ-ಚಪಾತಿ-ಅನ್ನ-ವಣ್ಗಿ-ಪಲ್ಯೆ ಎಲ್ಲಾ ಮಾಡ್ತಿದ್ವಿ, ಅದು-ಇದು ಅಂತ ಲೆಕ್ಕಾ ಇಲ್ಲ. ನಾವೆಲ್ಲ ಹಳ್ಳಿಗಾಡಿನ ಜನ ಬಡತನ ಅಂಬೋ ಬೆಂಕಿ ಎಲ್ಲಾನು ಕಲಸ್ಯಾದ. ಹಂಗಂತ ನಾವ ಅಡ್ಗಿ ಮಾಡ್ಕೊಂಡು ಉಣ್ತಿದ್ವಿ, ಆರಾಮ್ ಇದ್ವಿ.

ಇಷ್ಟು ದುಡೀತದ ನಡುವೆ ಹಾಡು ಹಾಡಾಽಕ ಹ್ಯಾಂಗ ಕಲ್ತಿ. ಓದ್ಯಾಕ-ಬರ್‍ಯಾಕ ಬರೆಂಗಿಲ್ಲ. ಈ ಕಥಿ ಪುಸ್ತಕದಾಗ ಇಲ್ಲ ಎಂದಾಗ, ಹ್ಞಾಂ ಅಲ್ಲೀಗೆ ಬರ್ತೀನ್ರಿ ಎಂದೇಳುತ್ತ ಹಾಡು-ಹಾಡಿಕೆಯ ಕಲಿಕೆಯನ್ನು ಹೇಳಲು ಸುರು ಮಾಡಿದ.

ನಮ್ಗ ಹಾಡಿ ಹೇಳಿ ಕಲಿಸಿದ ಸಾಯಬಣ್ಣ ಬಾಗ್ಮೋಡಿ ಅಂದಿನಲ್ರಿ ಆತ ನಾನು ಕೂಡಿ ಪಾನಮೊಳದಿಂದ ಅಂದ್ರ ನಾವಿರುವ ವಾಸಸ್ಥಳದಿಂದ ಜಾ-ಮಿಲ್‌ಗೆ ಏಳೆಂಟು ಕಿ.ಮೀ.ದಾರಿ ಕಾಲ್ನಡಿಗೆಯಲ್ಲಿ ತಾಸೆರಡು ತಾಸು ನಡಕೋತ ಹೋಗ್ತಿದ್ದೀವಿ. ಹೋಗೊ ಕಾಲಕ್ಕ ಹಾಲುಮತ ಕಾವ್ಯವನ್ನು ಸಾಯಬಣ್ಣ ಹಾಡ್ಕೊಂತ ಹೋಗ್ತಿದ್ದ. ನಾನು ಆತನ ಜೊತಿಗಿ ಹಾಡ್ತಿದ್ದೆ. ಇದು ಒಂದು ಜಾಗದಾಽಗ ಕುಂತು ಕಲ್ತ ಹಾಡಲ್ಲ. ನಡೀತಾ ನಡೀತಾ ದಾರ್‍ಯಾಗ ಕಲ್ತದ್ದು. ನಾವು ಬರೋಬ್ಬರಿ ಏನಿಲ್ಲೆಂದರೂ ಆರು ವರ್ಷದ ಮಟ್ಟಿ ಕೂಡಿ ಇದ್ದೀವಿ. ಮೂರು ವರ್ಷದಾಗ ಹಾಡ್ಕಿ ಕಲ್ತೀನಿ. ನೆನಪ ಮಾತ್ರ ಹೋಗಾಂಗಿಲ್ಲ. "ಹಾಲುಮತ ಕಾವ್ಯ" ಬಿಟ್ಟು ಬಾಕಿ ಹೇಳಿದ್ವು ಯಾವು ಗೊತ್ತಾಗಂಗಿಲ್ಲ. 'ಹಾಲು ಮತ ಕಾವ್ಯ" ಮಾತ್ರ. ನನ್ನ ಉಸಿರೊಂದಿಗೆ ಇದೆ ಎನ್ನುತ್ತಾನೆ ಸಿದ್ದಪ್ಪ ಮೇಟಿ. ನನ್ನ ಹಾಡ್ಕಿಗೆ ಕಾರಣ ಸಾಯಬಣ್ಣ ಬಾಗ್ಮೋಡಿ. ನೀನು ಕಲಿ. ನಿನಗ ಬರ್ತದ ಅಂದ. ನನ್ನ ಮ್ಯಾಲ ಬಾಳ ಬರೋಸ ಇಟ್ಟ ಮನಸ್ಯಾ. ಹಿಂಗಾಗಿ ಆತ ನನ್ನ ಪಾಲಿಗಿ "ಗುರು" ಎಂದು ಮನಸಾರೆ ಒಪ್ಪಿಕೊಳ್ಳುತ್ತಾನೆ. ಇದು ಜಾನಪದ ಗುರು ಶಿಷ್ಯರ ಸಂಬಂಧ. ಕೊಡುವವ ಗುರು, ಕಲಿಯುವವ ಶಿಷ್ಯ. ಗುರು-ಶಿಷ್ಯರು ಒಂದೇ. ಒಂದು ನಾಣ್ಯದ ಎರಡು ಮುಖವಿದ್ದಂತೆ. ಸಾಯಬಣ್ಣ ಬಾಗ್ಮೋಡಿ,

ಸಿದ್ದಪ್ಪ ಮೇಟಿ ಎತ್ತಲಿಂದ ಎತ್ತ ಸಂಬಂಧ. ಅದ್ಕೆ ಋಣಾನುಬಂಧ ಅನ್ನೋದು. ಸಾಯಬಣ್ಣ ತನ್ನ ಪಾಡಿಗೆ ತಾನು ಹಾಡ್ಕೊಂತ ಇದ್ರ, ಯಾರಿಗೂ ಕಲಿಸದ ಇದ್ರ, ಹಾಲುಮತ ಮಹಾಕಾವ್ಯ ಕಾಲಗರ್ಭದಲ್ಲಿ ಲೀನವಾಗಿ ಬಿಡುತ್ತಿತ್ತು. ಇದರ ಸಂಪಾದನೆಯ ಕೆಲ್ಸ ಬಹಳ ವಿಚಿತ್ರ ತಿರುವು ಪಡೆದಂತೆ, ಆಕಸ್ಮಿಕವೆಂಬಂತೆ, ಆಗಲೇಬೇಕಾದ ಕೆಲಸದಂತೆ ಮಹಾಕಾವ್ಯದ ಸಂಪಾದನೆ, ಮುದ್ರಣ ಆಗಬೇಕಾದರೆ ಏನಿಲ್ಲೆಂದರೂ ಎರಡೂವರೆ ಮೂರು ದಶಕಗಳ ಅವಧಿಯದ್ದಾಗಿದೆ. ಯಾವಾಗಲೋ ಒಂದು ಸಾರೆ ಆಕಸ್ಮಿಕವಾಗಿ ಬಸ್ಸಿನಲ್ಲಿ ಬಿ.ಬಿ.ಹೆಂಡಿಯವರು ಮಾತನಾಡಿಸಿದಾಗ ಈತನೊಬ್ಬ ಜನಪದ ಮಹಾಕಾವ್ಯದ ಹಾಡುಗಾರ ಎಂಬುದು ತಿಳಿಯುತ್ತಿದ್ದಂತೆಯೇ ಕುರುಡನಿಗೆ ಕಣ್ಣು ಬಂದಂತೆ, ಬಡವನಿಗೆ ಭಾಗ್ಯ ದೊರತಂತೆ ಆದ ಸಂದರ್ಭವನ್ನು ದಂಡೆಯವರು ಪ್ರಸ್ತಾವನೆಯಲ್ಲಿ ವಿವರಿಸಿದ್ದಾರೆ. ನಂತರ ಹತ್ತಿಪ್ಪತ್ತು ವರ್ಷಗಳ ಅಂತರದಲ್ಲಿ ದಂಡೆಯವರು ಇದನ್ನು ಸಂಪಾದಿಸಿ, ಮುದ್ರಿಸಿ ಕೊಟ್ಟದ್ದು ಓದುಗ ಲೋಕಕ್ಕೆ, ಜನಪದ ಮಹಾಕಾವ್ಯಕ್ಕೆ ದೊಡ್ಡ ಕೊಡುಗೆಯೆಂದೇ ಹೇಳಬೇಕು. ಇದಕ್ಕೆ ಪೂರಕವಾದ ವಿವರಗಳೆಲ್ಲಾ ಪ್ರಸ್ತಾವನೆಯಲ್ಲಿ ದಕ್ಕುತ್ತವೆ.

<u>**ಹಾಡ್ಕಿ ಸುರುವಾತು:**</u> ಯಾವಾಗ ಸಾಯಬಣ್ಣ ಬಾಗ್ಮೋಡಿ ಜತೆ ಕಲ್ತು ಹಾಡ್ತಾ ಹಾಡ್ತಾ ಹಾಡ್ಕಿ ಬಂತು. ಮನಸ್ಸಿಗೀಟು ಸಮಾಧಾನಾತು. ಹೀಂಗ ಇರೋವಾಗ ಸಾಯಬಣ್ಣ ಗುರುವಿನ ಹೆಸರು ಪ್ರಚಾರದಲ್ಲಿತ್ತು. ಆತನನ್ನು ಹಾಡಲಿಕ್ಕಿ ಕರೆಸುತಿದ್ರು. ನಾನು ಜೊತೆಗೆ ಇರಾಂವ. ಹಾಡೋದಂದ್ರ ಖುಷಿಗಾಗಿ, ಹಾಡ್ಕಿದಾಽಗ ಮಳುಗಿದೀವಂದ್ರ ದೇವಲೋಕದಾಽಗ ಇರತಿದ್ವಿ. ಅಂಥ ಕಥಿಭಾಗಗಳು, ಪ್ರಸಂಗಗಳು "ಹಾಲುಮತ ಕಾವ್ಯ"ದಾಗ ಅದಾವು. ಇಡೀ ಕಾವ್ಯವನ್ನು ಒಂದು ರಾತ್ರೀಗಿ ಹಾಡಿ ಮುಗಿಸೋದು ಸಾಧ್ಯವಿಲ್ಲ. ಅವರಿಗಿಷ್ಟವಾದ ಪ್ರಸಂಗಗಳನ್ನು ಅವ್ರು ಹೇಳುತಿದ್ರು. ನಾವು ಆ ಭಾಗಗಳನ್ನು ಹಾಡ್ತಿದ್ವಿ.

ಮನೆಯವರು, ಸುತ್ತಲ ಜನ, ವಠಾರ, ಊರು–ಕೇರಿ, ಬಂಧುಬಳಗ,

ಗೆಳೆಯರು, ಬೇಕಾದವ್ರು ಅಂತ ಜನ ಸೇರೋರು. ನಾವು ಹಾಡೋರು. ಹಾಡ್ಕಿ ಸುರುವಾದ್ರು ನಾವು ಯಾವುದೋ ಲೋಕದಲ್ಲಿ ತೇಲಿದಂತೆ ಆಗುತ್ತಿತ್ತು. ಆರಂಭದ ಸ್ತುತಿಗೆ ಮಂತ್ರಮುಗ್ಧವಾದಂತೆ ಸಭೆ ತಹಬಂದಿಗೆ ಬರುತ್ತಿತ್ತು. ಪ್ರಶಾಂತವಾದ ಸದ್ದಿಲ್ಲದ ರಾತ್ರಿ. ತಣ್ಣಗೆ ಬೀಸುವ ಗಾಳಿ, ಮನಕ್ಕೆ ಮುದಕೊಡುವ ಪ್ರಸಂಗಗಳು...

ಶಿವನೇ ನಮ್ಮಾಯಿ ದ್ಯಾವರು ಬಂದಾರ ಬನ್ನೀರೆ
ಸ್ವಾಮಿ ನಮ್ಮಾಯಿ ದ್ಯಾವರು ಬಂದಾರ ಬನ್ನೀರೆ
ಹಾಡ ಕಲಿಸಿದ ಹರ ನಿನ್ನ ಹಾಡೇನ ಓದ ಕಲಿಸಿದ ಗುರುವಿನ
ಓದ ಕಲಿಸಿದ ಗುರುವಿನ ಧರ್ಮರ ಸಂದಿಗೊಮ್ಮಿ ನೆನದೇವ.
ನಮಗೊಂದು ಹಾಡಿನ ವರವ ಕೊಟ್ಟಾರ ನಿಮಗೊಂದು ಮಲ್ಲಿಗಿ ಸರವಯ್ಯ
ನಿಮಗೊಂದು ಮಲ್ಲಿಗಿ ಸರವೊ ಸಾಯಿಬಣ್ಣ ಸಭಾದೊಳಗೆ ಕೊಂಡಾಡೇವ.

ಹೀಗೆ ಕೈಲಾಸದ ಹಾಡಿಕೆಯಿಂದ ಆರಂಭವಾಗುವ ಕಾವ್ಯ, ದೇವರನ್ನು ನೆನೆಯುತ್ತ ಕಲಿಸಿದ ಗುರುವನ್ನು ನೆನೆಯುತ್ತ, ಕೇಳಿದ ಜನರನ್ನು ನೆನೆಯುತ್ತ ಮುಂದೆ ಮುಂದೆ ಸಾಗಿ ತನ್ನ ಊರು ತನ್ನ ಪರಿಚಯ ತನ್ನ ಸಂಗಡ ಹಾಡುವ ಮೇಳದ ಪರಿಚಯದೊಂದಿಗೆ ಕಾವ್ಯ ತನ್ನ ಬಾಹುಗಳನ್ನು ಚಾಚುತ್ತ ಹೋಗುತ್ತದೆ....

ನಡುವಟ್ಟಿ ನಾಗರಕೆರಿಯ ವಳಗ ಜಂಬುದ್ವೀಪದ ಗಡ್ಡೇನ
ಕೆಂಪು ಮಡ್ಡಿ ಕೆಳಗೇನ ಸೈದಾಪೂರ ಊರೇನ
ಸೈದಾಪೂರ ಊರಾಗೆ ಮಾಳಿಂಗರಾಯನಿದ್ದಾರ
ಸಿದ್ದಪ್ಪ ಶಿವಗೇನಿ ಅಲ್ಲಪ್ಪ ಹೊಸದಾಗಿ ಹಾಡುವ ಕವಿಗೋಳ
ಮಹಾದೇವ ಮಾಳಪ್ಪ ಇವರ ಹಿಂದ ಸಂಗಡಿಗರೇನ.

ಎಂದು ತನ್ನ ಊರು–ಕೇರಿ, ದ್ಯಾವರು ಮೇಳದ ಪರಿಚಯವನ್ನು ವಿವರಿಸುತ್ತಾ ಹಾಡು ದೇವಲೋಕದ ಹಾದಿ ಹಿಡಿಯುತ್ತದೆ. ದೇವಲೋಕದಿಂದ ಮನುಷ್ಯ ಹೇಗೆ ಹುಟ್ಟಿದ ಜಗವ್ಹೇಗೆ ಬೆಳೀತು ಎನ್ನುವ ಕಥೆ ಕಣ್ಮುಂದೆ ಸುಳಿಯುತ್ತದೆ. ಭಾವುಕ ಲೋಕವನ್ನು ಭೂಮಿಗೆ ತರುತ್ತದೆ. ಕಥೆ ನಡೆವುದು ಭೂಮಿ ಮ್ಯಾಲೆ ಹಾಡು ಹಾಡುತ್ತ ಹಾಡಿನ

ನಡುವೆ ಮತ್ತು ಕೊನೆಯ ನಿಲುಗಡೆಯಲ್ಲಿ.....

ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೆ ಇಂದು ಒಂದು ಸಂದೇಳೊ
ಸಂದಿನ ಪದಗಳು ವಂದಿಸಿ ಹೇಳುವೆ
ತಂದಿ ಮಾಳಿಂಗರಾಯನೋ
ದೇವರು ಬಂದಾವ ಬನ್ನಿರೇ..

ಎಂದು ನಿಲ್ಲಿಸಿ ವಿರಾಮವನ್ನು ಪಡೆಯುತ್ತಾರೆ. ಹೀಗೆ ವಿರಾಮ ಪಡೆದ ಸಂದರ್ಭದಲ್ಲಿ ಪ್ರತಿ ಸಂಧಿಗೆ ಎಲೆ ಅಡಿಕೆ ಕೊಡುವ, ವಿಭೂತಿ ಧರಿಸುವ ಕ್ರಿಯೆ ನಡೆವುದು.

ಕಥಾ ಹಂದರದ ಮುಕ್ತಾಯಕ್ಕೆ ಹಾಡಿಸಿದವರಿಗೆ, ಹಾಡಿದವರಿಗೆ, ದನಿಗೂಡಿಸಿದವರಿಗೆ, ಹಾಡು ಕೇಳಿದವರಿಗೆ, ಶುಭವನ್ನು ಹಾರೈಸುತ್ತದೆ. ಒಳಿತನ್ನು ಬಯಸುತ್ತದೆ. ಹಾಡನ್ನು ನಿರ್ಲಕ್ಷಿಸಿದವರಿಗೆ ಕೇಡುಂಟೆಂದು ತಿಳಿಸುತ್ತದೆ.

ಕೈಲಾಸದ ಹಾಡಿಕೆಯಿಂದ ಪ್ರಾರಂಭವಾಗಿ, ಬೀರಪ್ಪನ ವೃತ್ತಾಂತ ಕಾಳಿನಾರ್ರ್ಯಾಣ ದೇವರ ವೃತ್ತಾಂತ, ಬೀರಪ್ಪನ ಜನನ ವೃತ್ತಾಂತ, ಅಕ್ಕವ್ವ-ಮಾಯವ್ವರ ವೃತ್ತಾಂತ ಹೀಗೆ ಕಾವ್ಯದಲ್ಲಿ ಹದಿನಾಲ್ಕು ಶರಣರ ವೃತ್ತಾಂತಗಳಿವೆ. ಹಾಡಿಸುವವರು ಯಾವುದರ ಮೇಲೆ ಹಾಡಂತಾರೋ ಆ ವೃತ್ತಾಂತದ ಮೇಲೆ ಹಾಡುವರು ಹಾಡುಗಾರರು. ಹೀಗೆ ರಾತ್ರಿ ಊಟವಾದ ನಂತರ ಸುರುವಾದ ಹಾಡು ಬೆಳಗಾಗೋ ತನಕ ನಡೀತದೆ. ಹಾಡಿದವರು, ಕೇಳಿದವರು, ಹಾಡಿಸಿದವರು, ಸಂತೋಷದ ವಾತಾವರಣದಲ್ಲಿ ಧನ್ಯತಾ ಭಾವವನ್ನು ಅನುಭವಿಸಿರುತ್ತಾರೆ. ಕಾವ್ಯದ ವೃತ್ತಾಂತ ಕೇಳಿದ ಜೀವಗಳು ಆತ್ಮತೃಪ್ತಿ ಅನುಭಾವಕ್ಕೆ ಒಳಪಟ್ಟು ದೇವಲೋಕದ ಅನುಸಂಧಾನಕ್ಕೆ, ಭಾವಪರವಶವಾದ ಭಾವಲೋಕಕ್ಕೆ ಸಮ್ಮಿಳಿತವಾಗಿರುತ್ತದೆ.

ಹಾಡು-ಕೇಳಿದ ಜನವೀಟು ಕೊಡೋರು, ಹಾಡು ಹೇಳಲಿಕ್ಕೆ

ಹಚ್ಚಿದವರು ಈಟು ಕೊಡೋರು. ಆಟು-ಈಟು ಅಂಥ ಲೆಕ್ಕ-ರೊಕ್ಕ ಫಿಕ್ಸ್ ಏನಿಲ್ಲ. ನಾವೂ ರೊಕ್ಕಕ್ಕೆಂತ ಹಾಡೋರಲ್ಲ. ಇದೊಂದು ದೇವರ ಸೇವಾ, ಭಕ್ತಿ ಸೇವಾ ಅಂತ ಹಾಡೋರು. ಮುಂಜಾನೆ ಮುಕ್ತಾಯದ ಪೂಜಕ್ಕ ಕಾಯಿ ಒಡೆಯೋರು. ಕಾಯಿ ಹೋಳು ಕೊಡುತಿದ್ರು. ಹಾಡಿಸಿದ ಮನೆಯವ್ರು ಊಟ ಮಾಡಿಸುತಿದ್ರು, ಊಟ-ಗೀಟ ಮಾಡ್ಕೊಂಡು ಆರಾಮಾಗಿ ನಮ್ಮ ಮನಿ ದಾರಿ ನಾವ್ ಹಿಡಿತಿದ್ವಿ. ಮತ್ತ ಯಾರಾರ ಹಾಡ್ಸಬೇಕೆಂದರ ಕೇಳಲಿಕ್ಕೆ ಬಂದರಗಿ ಕೇಳೋರು. ಅವರು ನಮ್ಗ ಕರೆಯೋರು. ನಾವು ಹೋಗಿ ಹಾಡೋರು. ಹೀಗೆ ಇದು ದಿನ ವಾರ ತಿಂಗಳುಗಟ್ಟಲೆ ನಿರಂತರವಾಗಿ ನಡೆಯುವ ಕೆಲಸ. ಹಂಗಾಗಿ ಇಡೀ ಮಹಾಕಾವ್ಯ ನಮ್ಮ ನಾಲೀಗಿ ಮ್ಯಾಲ ಅದಾ. ಯಾರಾರ ಕರ್ಲಿ, ಬಿಡ್ಲಿ ನಮ್ಮ ಪಾಡಿಗಿ ನಾವ್ ಹಾಡು ಗುನುಗುನುಸ್ತಾ ಕೂಡೋರು. ದಿನಾಲು ನಾವು ಹಾಡ್ತಾನೆ ಇರ್ತಿವಿ. ಹಾಡಲಿಲ್ಲಂದ್ರ ನಮ್ ಮನ್ಸು ಪಾಡಿರಿಂಗಿಲ್ಲ ಎಂದು ಸಿದ್ದಪ್ಪ ಮೇಟಿ ಹೇಳಿದ. ಪ್ರಶ್ನೆ ಕೇಳಿ, ಕಥಿ ಕೇಳಿ, ನಾವು ಧನ್ಯತಾಲೋಕದಲ್ಲಿ ಇದ್ವಿ.

ಈ ಹೊತ್ತಿಗೆ ಸೈದಾಪುರಕ್ಕೆ ಬಂದು ತಾಸೊಪ್ಪೊತ್ತಾಗಿತ್ತು. ಸಿದ್ದಪ್ಪ ನಾನು ಮಾತಾಡುವ ಸಂದರ್ಭದಲ್ಲಿ ಸಿದ್ದಪ್ಪನು ಅನೇಕ ಬಾರಿ ದಂಡೆಯವರ ಹೆಸರನ್ನು ಹೇಳಿ, ದಂಡೆ ಸಾಬ್ರಿಗಿ ಕೇಳ್ರಿ ಎನ್ನುತ್ತಿದ್ದನು. ಸಿದ್ದಪ್ಪನಿಗೂ, ದಂಡೆಯವರಿಗೂ ಅಷ್ಟು ಗಾಢವಾದ ಅನ್ಯೋನ್ಯತೆ ಬೆಳೆದು ಬಂದಿತ್ತು.

ನಾನು ಸುಮ್ಮನೆ ಮೊಬೈಲ್ ಮುಖಾಂತರ ದಂಡೆಯವರಿಗೆ ಸಂಪರ್ಕಿಸಿದೆ. ಮೊಬೈಲ್‌ನಲ್ಲಿ ಸಿಕ್ರು. ಏನ್ರಿ ಕರದಳ್ಳಿಯವರೇ ಎಂದಾಗ ಏನಿಲ್ಲ ಎಲ್ಲಾ ಆರಾಮ. ನಿಮ್ಮ ಸಿದ್ದಪ್ಪ ಮೇಟಿ ಬಲ್ಗಿ ಬಂದೀನಿ. ನೀವೂ ಹೋಗಿ ಅವ್ನಿಗಿ ಮಾತಾಡ್ಸು ಅಂದಿದ್ದಿರಲ್ಲ ಅಂದೆ. ಹೋ ಹೌದಾ ಎಂದರು. ಈಗಾ ಕರದಳ್ಳಿ ಸಿದ್ದಪ್ಪ ಮೇಟಿ ಹೇಣ್ತಿಗೀಟು ಮಾತಾಡ್ಸು. ಆಯಮ್ಮಂದೂ ದೊಡ್ಡ ಕಾಣ್ಕೆ ಅದಾ ಅಂದ್ರು. ಆಯ್ತು ಅಂದೆ. ಸಿದ್ದಪ್ಪನಿಗೀಟು ಕೊಟ್ಟು ದಂಡೆ ಸಾಬ್ರು ಮಾತಾಡ್ತಾರೆ ನೋಡು ಅಂದೆ. ಅವ್ರು ಮಾತಾಡಿದ್ರು.

ನಾವಾಡುವ ಮಾತುಗಳನ್ನು ಕೇಳ್ತಾ ಪಿಳಿಪಿಳಿ ಕಣ್ಣು ಬಿಟ್ಟು ನೋಡ್ತಾ ಅಕ್ಕವ್ವ ಮೇಟಿ ಅಡುಗೆ ಮನೆ ಹೊಸ್ತಿಲಲ್ಲೇ ಕುಳಿತಿದ್ದಳು. ಆಕೆಯ ಸೊಸೆ ಅಂದ್ರೆ ಶಿವಗೇನಪ್ಪನ ಹೆಂಡತಿ ಒಂದು ಕಡೆ ಕುಳಿತಿದ್ದಳು. ಅಕ್ಕವ್ವಳಿಗೂ ಈಗ ವಯಸ್ಸಾಗಿದೆ. ಕಣ್ಣು ಮಂಜು ಮಂಜು. ಬಾಗಿದ ಬೆನ್ನು ಸುಕ್ಕುಗಟ್ಟಿದ ಮುಖ. ಯಥಾ ಪ್ರಕಾರ ದುಡಿಮೆ. ಇಳಿವಯಸ್ಸಿನಲ್ಲಿ ಅಡುಗೆಯ ಕೆಲಸ. ಕಸ–ಕಡ್ಡಿ ಅಂತ ಗ್ರಾಮ ಗೌಜಲಿನಲ್ಲಿ ಮಾಡಿ ದಿನ ದೂಡುತ್ತಿದ್ದಾಳೆ.

ಏನಜ್ಜಿ ಸಿದ್ದಪ್ಪ ಯಜಮಾನ್ರು ಹಾಡು ಹಾಡ್ಕೊಂತ ಹೋಗ್ತಾರ. ಮತ್ ಮನಿ ಹ್ಯಾಂಗ ನಡೀತದ ಅಂದ್ರ. ನಡೀತೆದಪ್ಪ ನಡೀತದ.ನಮ್ಗೇನ ತಿಳೀತೆದ ಈಟ ಅಡ್ಗಿ ಮಾಡೋದು. ಕಸ ಮುಸುರಿ, ದನ–ಕರಾ ಅಂತ ಮನೀ ಇಡ್ಕೊಂಡು ಕೈಲಾದೋಟು ಅಡ್ಗಿ ಮಾಡ್ಕಂಡು ಇರ್ತೀನಿ. ಮದಲಿಂದ ಅವರಿಗೇನು ತ್ರಾಸ ಮಾಡಿಲ್ಲ. ಅದು ಬೇಕು, ಇದು ಬೇಕು ಅಂತ ಕೇಳಿಲ್ಲ. ಹಾಡ್ಕಿಯಿಂದ, ಕೂಲಿ ನಾಲಿಯಿಂದ ಐವತ್ತು ನೂರು ಬಂದ್ರ ನನ್ಗ ಕೊಟ್ಟಾರ ನಾನೇ ಮನಿ ನಡ್ಸೀನಿ. ಅವ್ರು ರೊಕ್ಕ–ರೂಪಾಯಿದರೋ ಅಲ್ರಿ ಅಂದ್ಳು.

ಸಿದ್ದಪ್ಪ ಮಾತಿನ ನಡುವೆ ಬಾಯಿ ಹಾಕಿದ. ಆಕೀಗಿ ರೊಕ್ಕಾ ಖರ್ಚು ಆಗಬಾರ್ದು. ಸಂಸಾರ ಮಾಡೋದಕ ಆಕೀನ ಶ್ಯಾಣ್ಯಾಕ ಆಳಾ. ನಾವಂತೂ ಹಾಡ್ಕೊಂತ, ಭಂಡಾರಕ್ಕಂತ ಮ್ಯಾಳ ಕಟಗೊಂಡು ಊರೂರು ಹೋಗೋರು. ಮನೀಕಡಿ ಏನು ಎಂತ ಅಂತ ಲೆಕ್ಕ ಹಾಕೋರಲ್ಲ. ಒಂದೂರಿನ ಹಾಡ್ಕಿಗಂತ ಹ್ವಾದೋರು ಮತ್ತ ನಾಕಾರು ಊರು ಮುಗ್ಸಿಕೊಂಡು ಬರೋರು. ಕರದರ ಒಲ್ಲೆ ಅನ್ನಾಕ ಬರಂಗಿಲ್ಲ. ಹಿಂಗಾಗಿ ಮನಿ ಸುಪರ್ದಿ (ಜವಾಬ್ದಾರಿ) ಎಲ್ಲಾ ಆಕೀದೆ. ನನ್ಗೂ ರೊಕ್ಕ ರೂಪಾಯಿ ಬ್ಯಾಡ. ನಾ ಹಂಗ ಗಳ್ಸಬೇಕಾದ್ರ ಬೇಕಾದೋಟು ಮಾಡ್ಬೋದಾಗಿತ್ತು. ಉಳಸಾ ಬುದ್ದೀನೆ ನನ್ಗ ಇಲ್ಲ ಎಂದು ತನ್ನ ವೃತ್ತಾಂತ ಹೇಳಿದ.

ಮತ್ತೇನ್ ಆಯ್ತು ಅಂದ್ರ. ಏನ್ ಹೇಳ್ಲಪ್ಪ ಅವ್ರು ಎಲ್ಲಿಗ್ಯಾರ ಹೋಗ್ಲಿ ಮನಿ ಹಿಡ್ಕೊಂಡು, ಮಕ್ಕಳ್ನ ಹಿಡಕೊಂಡು ನಾ ಊರಾಗ ಇರಾಕಿ

ಅವ್ರು ಊರೂರು ಹೋಗೋರು ಇಟೆ ಎಂದಳು. ಹಳ್ಳಿಯ ಮುಗ್ಧ ಹೆಣ್ಮಗಳು ಏನ್ ಮಾತಾಡಿಯಾಳು ಪಾಪ! ಸುಮ್ಮನೆ ಕುಂತು ಬಿಟ್ಟಳು. ಅದು ಸಹಜವೆ. ಆವೊತ್ತು ಪ್ರಶಸ್ತಿ ಬಂದಾಗಲು ಅದೇ ನೋಟ, ಇಂದು "ಜಾನಪದ ಸಿರಿ" ಪ್ರಶಸ್ತಿ ಬಂದು ದೊಡ್ಡ ಮೊತ್ತದ ಚೆಕ್ ಇದ್ದು ಅಷ್ಟೆ. ಅವೆಲ್ಲವುಗಳಿಂದ ನಿರ್ಮೋಹ. ಅಂತಹ ನಿರ್ಮೋಹ ಇರುವುದರಿಂದಲೇ ಸಿದ್ದಪ್ಪ ಮೇಟಿಯ ಮಹಾಕಾವ್ಯದ ಹಾಡುಗಾರಿಕೆಯ ಓಟ, ನಾಗಾಲೋಟ.

ಆಕೆಗೇನ್ ಗೊತ್ರಿ, ಕೈಲಾದೋಟ ಅಡ್ಗಿ ಮಾಡಾsಕಿ, ಕೆಲ್ಸ ಮಾಡಾsಕಿ ಎಂದು ಸಿದ್ದಪ್ಪ ಮೇಟಿಯ ಮಗ ಶಿವಗೇನಪ್ಪ ತನ್ನ ತಾಯಿಯ ಕುರಿತಾಗಿ ಹೇಳಿದ. ಶಿವಗೇನಪ್ಪನೂ ತಂದೆಯ ಹಾದಿಯೇ. ತಂದೆಯ ಜೊತೆಜೊತೆಯಲ್ಲಿ ಇಂದಿಗೂ ಹಾಡಲಿಕ್ಕೆ ಮೇಳದ ಜೊತೆಗೆ ಹಾಡ್ಕಿಗೆಂತಲೋ, ಭಂಡಾರಕ್ಕೆಂತಲೋ ವೃತ್ತಾಂತಕ್ಕೆಂತಲೋ ಹೋಗುತ್ತಾನೆ. ಹೀಗಾಗಿ ತಂದಿ ಮಗ ಇಬ್ರು ಒಂದೆ.

ಗ್ರಾಮ ಪರಿಸರದಲ್ಲಿ ಯಾವುದೇ ಬೇಕು, ಬೇಡಗಳಿಲ್ಲದೆ ಸಂಸಾರವನ್ನು ಸರಿದೂಗಿಸಿಕೊಂಡು ಹೋಗುವ ಅಕ್ಕವ್ವನಂಥ ಒಳ್ಳೆಯ ಸ್ವಭಾವದ ಹೆಂಡತಿ ಸಿಕ್ಕಿದ್ದರಿಂದಲೇ ಸಿದ್ದಪ್ಪ ಮೇಟಿಯಂಥ ಯಜಮಾನ "ಜನಪದ ಹಾಲುಮತ ಮಹಾಕಾವ್ಯ"ವನ್ನು ತನ್ನ ನಾಲಿಗೆಯ ಮೇಲೆ ಬರಕೊಳ್ಳಲಿಕ್ಕೆ ಸಾಧ್ಯವಾಗಿದೆ. ಇದೇ ಜನಪದರ ಶಕ್ತಿ. ಜನಪದ ಕಾವ್ಯದ ಶಕ್ತಿ. ಸಿದ್ದಪ್ಪ ಮೇಟಿಯ ಮನದಾಳಕ್ಕೆ ಇಳಿದ ಮಹಾಕಾವ್ಯ ಜನ ಮಾನಸಕ್ಕೆ, ನಂಬಿಗೆಗೆ ಇಂಬುಗೊಟ್ಟು ಜನಕ್ಕೆ ಆನಂದ ತುಂದಿಲವಾಗಿ ಸಂತೋಷವನ್ನು ಕೊಡುತ್ತಿದೆ. ನಿರಪೇಕ್ಷ-ನಿರ್ಮೋಹದಿಂದ ನಡೆದ ಮಹಾಕಾವ್ಯದ ಹಾಡುಗಾರಿಕೆ ಮೈ ಮನಗಳಲ್ಲಿ ತುಂಬಿಕೊಂಡಿದೆ. ಕೇಳುವವರ ಅಂತಕರಣವನ್ನು ಸೂರೆಗೊಂಡಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಕಾವ್ಯ ಕೇಳಿದ ಮೇಲೆ ಮೌನವೆ ಎಲ್ಲ.

<u>ಉಪಜೀವನಕ್ಕಾಗಿ ಏನೇನು ಮಾಡಿದ್ರಿ:</u> ನಾ ಏನ್ ಓದಿದಾಂವಲ್ಲ, ಬರದಾಂವಲ್ಲ, ದುಡ್ಯೋದು, ಉಣ್ಣೋದು, ದುಡೀಲಿಕ್ಕಿ ಇಂತ ಕೆಲ್ಸ

ಅಂಥ ಏನ್ ಇಲ್ಲ. ಕೂಲಿ–ನಾಲಿ ಮಾಡ್ತೀನಿ. ಕಿರಾಣಿ ಅಂಗಡಿ ಇಟ್ಟಿದ್ಯಾ. ಸೇಂಗಾ ಯಾಪಾರ ಮಾಡೀನಿ. ಬದುಕಾಕ ಹೊಟ್ಟಿ ಸಲುವಾಗಿ ದುಡಿದೀನಿ. ಬದುಕೀನಿ, ಹಾಡೀನಿ. ಹಾಡ್ಕಿ ಹಾಡ್ಕೊಂತ ಊರೂರು ಹೋಗಿನಿ ಅಂತಾ ಈಗ ಹೇಳಿನಲ್ಲ. ಹಾಡ್ಕಿ ಇದ್ದಾಗ ಮಕ್ಳು ಮನಿ ಸಂಭಾಳಿಸದವಳು ನನ್ನ ಹೆಂಡ್ತೀನೆ ಎಂದನು. ನಾನು ಎಂಟ್ಹತ್ತು ದಿನಾ ಹ್ವಾದ್ರು ಕೇಳಿಲ್ಲ. ಎಲ್ಲೆಲ್ಲೀಗಿ ಹೋಗಿದ್ರಿ ಅಂದ್ರ ಸುರಪುರ, ಸಿಂದಗಿ, ಯಾದಗಿರಿ, ಮೈಲಾಪೂರ, ಶಾಬಾದಿ, ಮಹಾರಾಷ್ಟ್ರದುದ್ದಕ್ಕೂ ಹಾಡಿ ಬಂದೀನಿ, ಕಲ್ಲದೇವನಳ್ಳಿ–ವಜ್ಜಲ ಗ್ರಾಮಗಳಲ್ಲಿ ಹಾಡ್ಕಿ ಕಲ್ಸೀನಿ. ಸಂಸಾರ ಹೊತ್ತು ಮಾಡಿಲ್ಲ. ನನ್ಗ ಖುಷಿ ಅನಸ್ತದ. ಯಾವುದೇ ನಿರೀಕ್ಷೆ ಇಲ್ಲ. ಕುಂತ್ರು–ನಿಂತ್ರು ಹಾಡಿನದೇ ಕನವರಿಕೆ. ಯಾವುಯಾವುದೋ ಮಾತಾಡ್ತೀವಿ. ಸಂಸಾರಂದ ಮ್ಯಾಲ ಒಳ್ಳೇದು ಕೆಟ್ಟದ್ದು ಇರತಾದ. ಆಡೋವು ಆಡ್ತೀವಿ. ಆಡಬಾರ್ದು ಆಡ್ತೀವಿ. ನನ್ ಪುಣ್ಯ ಅದಾ. ಸೊಲ್ಪು ಹೊತ್ತಿನ ಹಿಂದ ಆಡಿದ ಯಾವ ಮಾತು ನನಗೆ ನೆನಪಿರಂಗಿಲ್ಲ. ಈಗಲೂ ನನಗೆ ಭೂಮಿ ಇಲ್ಲ. ಸರಕಾರದಿಂದ ಸಾವಿರ ರೂಪಾಯಿ ಮಾಸಾಶನ ಬರ್ತದೆ. ಅದ್ರ ಮ್ಯಾಲ ನಡದದ ಎಂದು ಮಾತುಗಳನ್ನು ನಿರ್ಭಾವುಕನಾಗಿ ಆಡಿದ.

ಕೂಲಿನಾಲಿ ಮಾಡಿ ಬದುಕೋ ಜೀವಿಗೆ ಸಂಸಾರ ದೊಡ್ಡದೇ ಎಂದು ಹೇಳ್ಬೇಕು. ಸಿದ್ದಪ್ಪ ಮೇಟಿಯ ತಂದೆ ಭೀಮಪ್ಪ ತಾಯಿ ನಾಗಮ್ಮ ಊರು ಸೈದಾಪೂರ. ಭೀಮಪ್ಪನಿಗೆ ಮೂವರು ಗಂಡು ಮಕ್ಕಳು. ಮೊದಲನೆಯವ ನಿಂಗಪ್ಪ, ಎರಡನೆಯವ ನಮ್ಮ ಹಾಡುಗಾರ ಸಿದ್ದಪ್ಪ, ಮೂರನೆಯವ ಬಸ್ಸಣ್ಣ. ಮೊದಲನೆ ನಿಂಗಪ್ಪ, ಕೊನೆಯವ ಬಸ್ಸಣ್ಣ ಕಾಲದಕರೆಗೆ ಸಂದು ಹೋಗಿದ್ದಾರೆ. ಈಗ ಸಿದ್ದಪ್ಪ ನಮ್ಮ ಜೊತೆಗೆ ಇದ್ದಾರೆ. ಗಟ್ಟಿ ಮುಟ್ಟಾಗಿದ್ದಾರೆ. ಇರುವಷ್ಟು ದಿನಾ ಚಂದಾಗಿರಲಿ ಅಂತ ಹಾರೈಸೋಣ. ನಿಂಗಪ್ಪಣ್ಣ ನೂರಾ ಐದು ವರ್ಷ ಬದುಕಿ ಹೋಗಿದ್ದಾನೆ ಎಂದು ಮಾತಿನ ನಡುವೆ ಹೇಳಿದರು.

<u>**ಸಿದ್ದಪ್ಪ ಮೇಟಿಯ ಸಂಸಾರ:**</u> ಸಿದ್ದಪ್ಪ ಮೇಟಿ ಅಕ್ಕವ್ವ ದಂಪತಿಗಳ

ಸಂಸಾರದಲ್ಲಿ ಐದು ಹೆಣ್ಮಕ್ಕಳು ಮೂವರು ಗಂಡು ಮಕ್ಕಳು. ೧)ಈರಮ್ಮ, ೨)ಮಾಯಮ್ಮ, ೩)ಮಹಾದೇವಮ್ಮ, ೪)ಗೌರಮ್ಮ, ೫)ಸಂಗಮ್ಮ. ಗಂಡು ಮಕ್ಕಳಲ್ಲಿ ೧)ತಿಪ್ಪಣ್ಣ, ೨)ಶಿವಗೇನಪ್ಪ, ೩)ಭೀಮಪ್ಪ. ಬಹುದೊಡ್ಡ ಸಂಸಾರವೆಂದೇ ಹೇಳಬೇಕು. ಎಲ್ಲರಿಗೂ ಮದುವೆಯಾಗಿದೆ. ಅವರವರ ಸಂಸಾರಗಳು ಅವರೊಂದಿಗೆ ಸುಂದರವಾಗಿವೆ. ಇಷ್ಟಿದ್ದರೂ ನಾನು ನನ್ನ ಹೆಂಡತಿ ಅಡ್ಗಿ ಮಾಡ್ಕೊಂಡು ಉಣತೀವಿ. ಯಾ ಮಕ್ಳ ರಿಜಕನ್ಯಾಗ ಇಲ್ಲ ಎನ್ನುತ್ತಾನೆ ಸಿದ್ದಪ್ಪ. ಮನೆ ಸಣ್ಣದು. ಮನಸ್ಸು ದೊಡ್ಡದು. ಬದುಕಿನ ಬಹು ದೊಡ್ಡ ವಿವರಗಳೇನು ಹುಡುಕಿದರೆ ಸಿಗೋದಿಲ್ಲ. ಪ್ರಶಸ್ತಿ ಫಲಕಗಳು ಅಲ್ಲ್ಯಾವ ಅಂತ ತೋರ್ಸಿದ. ಅವುಗಳಿಂದ ಹೊಟ್ಟೆ ತುಂಬೋದಿಲ್ಲ ಎಂಬ ಖಾತ್ರಿ ಸಿದ್ದಪ್ಪನಿಗಿದ್ದಂತೆ ನನಗೂ ಖಾತ್ರಿಯಿದೆ.

<u>**ಸೊಲ್ಲಾಪುರ ಬಿಟ್ಟದ್ದು:**</u> ಹೊಟ್ಟೆಪಾಡಿಗಾಗಿ ಸೈದಾಪುರ ಬಿಟ್ಟು ಸೊಲ್ಲಾಪುರ ಜಾಮಿಲ್ ಸೇರಿದ್ದ ಸಿದ್ದಪ್ಪನಿಗೆ ಮಿಲ್ ಹೊಟ್ಟೆಗೆ ಅನ್ನ ಕೊಟ್ಟದ್ದಂತು ಸರಿಯೆ. ಆದರೆ ಜೊತೆ ಜೊತೆಗೆ ಪೂರ್ವಯೋಜಿತವೆಂಬಂತೆ ಸಾಯಿಬಣ್ಣ ಬಾಗ್ಮೋಡಿ ಎಂಬ ಹಾಡಿಕೆಯ ಗುರು ಸಿಕ್ಕು ಹಾಡ್ಕಿ ಕಲಿತದ್ದು ಜೀವನದ ಬಹುದೊಡ್ಡ ಗಳಿಕೆ. ಅಕ್ಷರ ಕಲಿಕೆ ಇರದ ಸಿದ್ದಪ್ಪ ಮೌಖಿಕ ಪರಂಪರೆ ಶ್ರವ್ಯ ಪರಂಪರೆಯಲ್ಲಿ "ಜನಪದ ಹಾಲುಮತ ಮಹಾಕಾವ್ಯ"ವನ್ನು ಕಂಠಸ್ಥಗೊಳಿಸಿಕೊಂಡದ್ದು ಸಣ್ಣ ಸಂಗತಿಯೇನಲ್ಲ. ಸೊಲ್ಲಾಪುರದ ಗಳಿಕೆಯೆಂದರೆ "ಮಹಾಕಾವ್ಯದ ಕಂಠಸ್ಥ" ಎನ್ನುವುದೇ ಆಗಿತ್ತು.

ನಮ್ಮ ದೇಶಕ್ಕೆ 'ಪ್ಲೇಗ್ ಮಹಾಮಾರಿ' ಎಂಬ ರೋಗ ಬಂದು ಜನಗಳನ್ನು ದಂಗು ಬಡಿಸಿದ ಕಾಲ. ಇಡೀ ಊರಿಗೆ ಊರೇ ಖಾಲಿ ಮಾಡಿ ಅಡವ್ಯಾಗ ಇರುತಿದ್ರು. ಇಲಿಗಳು ಜಂತಿಲಿಂದ ಬಿದ್ದು ಗಿರಗಿರ ತಿರುಗಿ ಸಾಯೋವು. ಅವು ಸತ್ತಾವಂದ್ರ ಮನ್ಯಾಗ ಸಾಯೋದು ಗ್ಯಾರಂಟಿ ಎಂಬ ಸಂಗತಿ ಜನಜನಿತವಾಗಿತ್ತಂತೆ. ಪ್ಲೇಗಿನ ಕಾಲಾಗ ಊರು ಬಿಟ್ಟು ಅಡವ್ಯಾಗ ಗುಡಿಸಲು ಹಾಕ್ಕೊಂಡು ಬಾಳ್ವೆ ಮಾಡೀವಿ ಎಂದು ನಮ್ಮ ತಂದೆ ನಮಗೆ ಹೇಳ್ತಿದ್ದ. ಈ ಸುದ್ದಿ ಯಾಕ ಬಂತು ಅಂದ್ರು. ನಮ್ಮ

ಮನೆಯಲ್ಲಿ ಕಬ್ಬಿಣದ ಒಂದು ದಪ್ಪ ಉದ್ದವಾದ ಸಲಾಕಿ ಅದಾ. ಅದನ್ನು ಸುತ್ತು ಬಾವಂತಿಗೆಯ ಆ ಕಡೆ ಈ ಕಡೆ ನಡುವೆ ಮಾಡಿ ಇಟ್ಟಿದ್ದಾರೆ. ಇಂದಿಗೂ ಅದು ನಮ್ಮ ಮನೆಯಲ್ಲಿದೆ. ಇದು ಯಾಕ ಅಂದದಕ್ಕ ನಮ್ಮಪ್ಪ ನನಗ ಪ್ಲೇಗಿನ ಸುದ್ದಿ ಹೇಳಿದ್ದ. ಒಂದೊಂದು ಊರಾಗ ನಾಕಾರ ಮಂದಿ ಸತ್ರ ಒಂದೊಂದು ಕುಣ್ಯಾಗ ಇಟ್ಟಾರ ಎಂಬ ಸಂಗತೀನೂ ನಾನು ಕೇಳೀನಿ. ಅಂಥ ಭಯಂಕರವಾದ ಮಹಾಮಾರಿ ರೋಗ ಪ್ಲೇಗು. ಅದಕ್ಕೆ ಸರಿಸಮಾನವಾಗಿ ಇಂಥದ್ದೆ ಒಂದು ರೋಗ ಸಿಡುಬುರೋಗ.

ಪ್ಲೇಗ್ ಬಂದ ಸಂದರ್ಭದಲ್ಲಿ ಸಿದ್ದಪ್ಪನಿಗೆ ಯಾವ ಜಾಮಿಲ್ ಆಸರೆ ಕೊಟ್ಟಿತ್ತೊ, ಅದೇ ಸೊಲ್ಲಾಪುರ ಈಗ ಜಾ–ಸೈದಾಪುರ ಎಂದು ಹೇಳಿದಂತೆ ಆಗಿತ್ತು. ಜೀವದ ಭಯ, ಊರು–ಉದ್ಮಾನ, ಬಂಧು–ಬಳಗ ಬಿಟ್ಟು ಇಲ್ಲಿ ಇರೋದಾದ್ರು ಹೆಂಗೆ ಎಂಬ ಪ್ರಸಂಗದಲ್ಲಿ ಸಿದ್ದಪ್ಪ ಮೇಟಿ ಸೊಲ್ಲಾಪುರ ಬಿಟ್ಟು ಸೈದಾಪುರಕ್ಕೆ ತಿರುಗಿ ಬಂದಿದ್ದಾನೆ. ತಿರುಗಿ ಬಂದವನು ಮತ್ತೆ ಸೊಲ್ಲಾಪುರಕ್ಕೆ ದುಡಿಯಲೆಂದು ಹೋಗಿಲ್ಲ. ಆದರೆ ಒಂದು ಮಾತ್ರ ಸತ್ಯ. ಹಸಿದ ಒಡಲನ್ನು ಹೊತ್ತುಕೊಂಡು ಸೊಲ್ಲಾಪುರಕ್ಕೆ ಹೋದಾಗ ಒಡಲು ತುಂಬಿತು. ಬುದ್ಧಿಯ ಮಡಿಲು ತುಂಬಿತ್ತು. ಸಿದ್ದಪ್ಪ ಮೇಟಿ, 'ಮೇಟಿ'ಯಾಗಿ ಬಂದಿದ್ದ. ಮೇಟಿ ಎಂದರೆ ಕಣದಲ್ಲಿಯ ಕಂಬ, ಶ್ರೇಷ್ಠತೆ, ಮುಖ್ಯಸ್ಥ, ಮುಖ್ಯವಾದ ಸೇವಕ, ನೇಗಿಲಿನ ಹಿಡಿ ಎಂಬರ್ಥಗಳನ್ನು ಕೊಡುತ್ತವೆ. ಈ ಎಲ್ಲಾ ಅರ್ಥಗಳು ಸಿದ್ದಪ್ಪ ಮೇಟಯಲ್ಲಿ ಅಳವಟ್ಟಿದ್ದವು. ಅದುವೆ "ಜನಪದ ಹಾಲುಮತ ಮಹಾಕಾವ್ಯ"ವು ಕಂಠಸ್ಥಗೊಂಡದ್ದು. ಅಂಥ ಸಿರಿತನ ಯಾರಿಗುಂಟು–ಯಾರಿಗಿಲ್ಲ. ಕಂಠದಲ್ಲಿದ್ದುದು, ತಲೆಯಲ್ಲಿದ್ದುದು ಯಾರೂ ಕದಿಯಲು ಬಾರದಂಥ ವಸ್ತುವನ್ನು ಪಡೆದುಕೊಂಡು ಬಂದಿದ್ದ ಸಿದ್ದ ಹೆಸರಿನ ಸಿದ್ದಪ್ಪ ಮೇಟಿ.

<u>**ಸೈದಾಪುರಕ್ಕೆ ಬಂದದ್ದು:**</u> ಹೊಟ್ಟೆಪಾಡಿಗಾಗಿ ಹೋದ ಸಿದ್ದಪ್ಪ ಮೇಟಿ ಪ್ಲೇಗ್ ಕಾರಣವಾಗಿ ಸೈದಾಪುರಕ್ಕೆ ಬರಲೇಬೇಕಾಯಿತು. ಹುಟ್ಟಿ ಬೆಳೆದ

ಊರು ಕೈ ಮಾಡಿ ಕರೆಯುತ್ತಿತ್ತು. ದಿಗ್ಗಿ ಮೂಲಕ ಹಾಯ್ದು ಸೈದಾಪುರಕ್ಕೆ ಹೋಗುವಾಗ ಶಹಾಪುರದ ಸಗರಾದ್ರಿ ಪರ್ವತ. ಶಹಾಪೂರ-ದಿಗ್ಗಿ ಸೈದಾಪುರ. ನಾಗನಟ್ಗಿ, ಬಾಣಂತಿಹಾಳ, ಸಗರ ವ್ಯಾಪಿಸಿದ ಬಹುದೊಡ್ಡ ಉದ್ದನೆಯ ಪರ್ವತ. ದಿಗ್ಗಿ ಪರ್ವತದಟೆ ಎತ್ತರದ ನೆಲೆಯಲ್ಲಿ 'ದಿಗ್ಗಿಯ ಸಂಗಮನಾಥ' ನೆಲೆಯಾಗಿದ್ದಾನೆ. ದಿಗ್ಗಿಯಿಂದ ಸ್ವಲ್ಪ ದೂರ ಕ್ರಮಿಸಿದರೆ ಸಿಗುವ ಊರೇ ಸೈದಾಪುರ.

ಸೊಲ್ಲಾಪುರ ಬಿಟ್ಟು ಬಂದ ಮೇಲೆ ಮುಂದೇನು? ಎಂದು ಸಿದ್ದಪ್ಪನಿಗೂ ಕಾಡಿರಬೇಕು. ಅಲ್ಲಿಂದ ಬಿಟ್ಟು ಬಂದ ಮೇಲೆ ಮುಂದೇನು ಎಂಬ ಪ್ರಶ್ನೆಗೆ ಅದೇ ದುಡಿತದ ಉತ್ತರ. ನಮ್ಗಂತು ಹೊಲಾನು ಇಲ್ಲ. ಬಿತ್ತು-ಬೆಳಸು ಇಲ್ಲವೇ ಇಲ್ಲ. ಕಾಡು-ಕಣ ಅಂತಾನು ಮಾಡಿಲ್ಲ. ಕುರಿಮರಿಯೂ ಇದ್ದಿಲ್ಲ. ತುತ್ತಿನ ಚೀಲ ತುಂಬಲೇಬೇಕು ಸುಮ್ಮನೆ ಕೂಡುವ ಹಾಗಿಲ್ಲ. ಮತ್ತದೇ ಹಳೆಯ ವೃತ್ತಿಯಾದ ಕೂಲಿ-ನಾಲಿ ಮಾಡುವ ಕೆಲಸ. ದುಡ್ಕೊಂಡು ತಿನ್ನೋರಿಗೆ ಊರೇನು-ಉದ್ಮಾನೇನು. ಕೂಲಿ-ನಾಲಿ ಮಾಡೋದು ಬದುಕೋದು. ಸೈದಾಪುರದಿಂದ ಏಳೆಂಟು ಕಿ.ಮೀ.ಅಂತರವಿರುವ ಶಹಾಪುರ. ಶಹಾಪುರ ತಾಲ್ಲೂಕ ಕೇಂದ್ರ.

ಆ ಹೊತ್ತಿಗಾಗಲೇ ಶಹಾಪುರದಲ್ಲಿ ಚರಬಸವ ತಾತ (ಬಸ್ಸಯ್ಯ ಮುತ್ತ್ಯಾ) ಎಂಬ ಕಾಯಕಜೀವಿಗಳು ಲಿಂಗೈಕ್ಯರಾಗಿದ್ದರು. ಅವರ ಗದ್ದುಗೆಯನ್ನು ಕಟ್ಟುವ ಕೆಲಸ ಭರದಿಂದ ನಡೆದಿತ್ತಂತೆ. ಅಲ್ಲಿ ನಾನು ಗದ್ಗಿ ಕಟ್ಟುವ ಕೆಲಸದ ಮೇಲೆ ಮುತ್ತ್ಯಾನ ಗದ್ದುಗೆ ನಮ್ಮ ಕೈಮ್ಯಾಲೆ ಆಗ್ಯಾದ ಎಂಬ ಇತಿಹಾಸವನ್ನು ಸಿದ್ದಪ್ಪ ಮೇಟಿ ಹೊರಗೆಡಹಿದ. ಇಂದು ಗದ್ದುಗೆಯು ಒಂದು ದೊಡ್ಡ ದೇವಾಲಯವಾಗಿ ಶಹಾಪುರದ ಪ್ರಾತಃಸ್ಮರಣೀಯ ಕೇಂದ್ರವಾಗಿ ನಮ್ಮೆದುರು ಜೀವ ತಳೆದು ನಿಂತಿದೆ.

ಶಹಾಪುರವು ವ್ಯಾಪಾರಿ ಕೇಂದ್ರವಾಗಿದ್ದಿತು. ಅಡಲೇ ಅಂಗಡಿಗಳ ವ್ಯಾಪಾರವೂ ಭರಾಟೆಯಲ್ಲಿತ್ತು. ಬೆಳೆ ಕಾಲಕಾಲಕ್ಕೆ ಬಂದು, ಬೆಳಸು ಚೆನ್ನಾಗಿ ಬರುತ್ತಿತ್ತು. ಇದರಿಂದಾಗಿ ವ್ಯಾಪಾರವೂ ಚೆನ್ನಾಗಿತ್ತು. ಅಡಲೇ ಅಂಗಡಿಗಳಿಗೆ ಒಂದೊಂದು ದೊಡ್ಡ ಗೋಡಾನುಗಳು (ಗೋದಾಮು)

ಇರುತ್ತಿದ್ದವು. ಈ ಗೋಡಾನಗಳು ಬಹಳ ಎತ್ತರದವು. ಕಾಳು-ಕಡಿ ಸೇಂಗಾ ಚೀಲಗಳನ್ನು ಎಷ್ಟೇ ಎತ್ತರಕ್ಕೆ ನಿಟ್ಟು ಕಟ್ಟಿದರೂ ಛತ್ತಿಗೆ ತಗಲುಬಾರದು ಎಂಬ ಕಾರಣಕ್ಕೆ ಬಹಳ ಎತ್ತರ ಕಟ್ಟಿರುತ್ತಿದ್ದರು. ಛಾವಣಿಯ ಮೇಲುಹೊದಿಕೆ 'ಪತ್ರಾಸ'ದಾಗಿರುತ್ತಿತ್ತು. ಇಂಥ ಗೋಡಾನಕ್ಕೆ ಸುಣ್ಣ ಬಡಿಯುವುದೆಂದರೆ ಸಾಹಸದ ಕೆಲಸವೆ ಸರಿ. ಅಂಥ ಕೆಲಸವನ್ನು ತಾನು ಮಾಡಿದುದನ್ನು, ಸುಣ್ಣ ಬಡಿದಿದ್ದನ್ನು ಸಿದ್ದಪ್ಪ ಹೇಳುವಾಗ ಮತ್ತೊಂದು ಸಾಹಸಗಾಥೆ ಕೇಳಿದಂತೆ ಆಗುತ್ತದೆ. ಹದಿನಾರು ಹಲ್ಲಿನ ಒಂದು ಸಿಡಿ. ಅಂಥ ಮೂರು ಸಿಡಿ(ಸಿಡಿ-ನಿಚ್ಚಣಿಕೆ) ಗಳನ್ನೂ ಕಟ್ಟಿ ಸುಣ್ಣ ಬಡದೀನಿ ಎಂದು ಹೇಳುವುದನ್ನು ಕೇಳಿದಾಗ ಎದೆ ಝಲ್ಲೆನ್ನಿಸುತ್ತದೆ. ಒಂದು ಸಿಡಿ ಏರಬೇಕಾದರೆ ಬೀಳುವುದೇನೋ ಎಂಬ ಭಯ ಕಾಡುವಾಗ ಮೂರು ಸಿಡಿ ಕಟ್ಟೋದಂದ್ರೆ ಸಾಮಾನ್ಯ ಕೆಲಸವಲ್ಲ. ಅದಕ್ಕೆ ಎಂಟೆದೆಯೇ ಬೇಕು. ಸಿಡಿ ಏರಿ ಸುಣ್ಣ ಹೊಡೆಯುವುದು ಎಂದರೆ ಸ್ವರ್ಗ ಕಂಡಂತ ಪರಿ ಅದು. ಸಿದ್ದಪ್ಪ ಮೇಟಿ ಇಂತಹ ಕಠಿಣ ಕೆಲಸಗಳನ್ನು ಬಹಳ ಎಚ್ಚರಿಕೆಯಿಂದ ನಿಭಾಯಿಸಿದ್ದಾನೆ ಎಂದರೆ ಆತನ 'ಸೃಜನಶೀಲ' ಶಕ್ತಿ ಎಷ್ಟಿರಬೇಕು.

<u>ಬಸವ ಪಟ್ಟಣದ ಘಟನೆ:</u> ಜಾತ್ರಿ-ಜಮಾತಿ ಇದ್ದಲ್ಲಿ ಹಾಡ್ಕಿಗಂತ ಹೋಗೋದಿರತದ. ಆ ಊರು, ಈ ಊರು ಅಂತಾ ನೇಮಏನ್ ಇಲ್ಲ. ಕರದಲ್ಲಿ ಹೋಗೋದು. ಸೇವಾ ಮಾಡೋದು. ಹಾಡ್ಕಿ ಆಡೋದು. ಇರೋವಷ್ಟು ದಿನಾ ಇರೋದು. ಊರಿಗಿ ವಾಪಸ್ಸು ಬರೋದು. ರೊಕ್ಕ ರೂಪಾಯಿ ಅಂತ ಕಾಡಂಗಿಲ್ಲ-ಬೇಡಂಗಿಲ್ಲ. ದಾರಿ ಖರ್ಚೀಗಿ ಆದ್ರ ಆಯ್ತು. ಅದರಿಂದೇನು ನಮ್ ಸಂಸಾರ ನಡೆಸಂಗಿಲ್ಲ. ದೇವರ ಸೇವಾ, ಜನಸೇವಾ, ಸಮಾಜಸೇವಾ ಅಂತ ಮಾಡ್ಕೊಂತ ಹೊಂಟೀವಿ. ಎಲ್ಲಿ ಹ್ವಾದ್ರೂನೂ ಇಷ್ಟು ಬೇಕೆಂದರೋ ಅಲ್ಲಾ. ಬ್ಯಾಡಂದರೋ ಅಲ್ಲ. ಕೊಟ್ಟೋಟು ತಗೊಂಡು ಬಂದೀವಿ. ಜೇವರ್ಗಿ ತಾಲೂಕಿನ ಬಸವ ಪಟ್ಟಣ ಎಂಬ ಗ್ರಾಮದ ಘಟನೆಯನ್ನು ನೆನಪಿಸಿಕೊಂಡು ಸಿದ್ದಪ್ಪ ಹೇಳಿದ. ಆ ಊರಿನ ಜಾತ್ರಿ ಮೂರು ದಿನದ್ದು. ಬಾದಾಮಿ ಅಮಾಸಿ, ೧ನೇ ತಿಂಗಳು, ನಾವು ಸೈದಾಪೂರದಿಂದ ಊರು ಬಿಡೋ ಕಾಲಕ್ಕ

ಹತ್ತಾರು ರೂಪಾಯಿ ಇದ್ವು. ಊರೂರಿಗಿ ಬಸ್ಸಿನ ಕಾಲ ಅಲ್ಲ. ಎಲ್ಲೀತನ್ಕಾ ಬಸ್ ಹೋಗ್ತಾವಾ ಅಲ್ಲೀತನ ಹೋಗೋದು. ಮುಂದಂತೂ ಕಾಲ್ನಡಿಗೆ ಅದಲ್ಲ. ಬುತ್ತಿ ಕಟಗೊಂಡು ಮ್ಯಾಳದ ಜತೀಗಿ ಹೋದ್ವಿ. ನಾಲ್ಕಾರು ಜನ ಇದ್ರು. ಖುಷಿಯಾದ ವಾತಾವರಣ ಇತ್ತು. ಹಿಮ್ಮೇಳದ ಜೊತೆಗೆ ಹಾಡು ಹೇಳೋರು. ವೃತ್ತಾಂತ ಹೇಳೋರು. ಸೊಲ್ಲ ಹಿಡಿಯೋದು. ಆನಂದ ಇತ್ತು. ಮೂರು ದಿನ ಅಂದ್ರೆ ಮೂರು ಘಳಿಗಿ ಹ್ವಾದಂಗ ಆಯ್ತು.

ಆ ಗುಡಿ ಪೂಜಾರಿ ಬಾಳ ಸಿಟ್ಟೀನವಂತ. ಪೂಜಾರಿ ಸಿಟ್ಟಿನವ ಅಂದಮ್ಯಾಲ ಬಂದ ಮಂದೀ ಅಂಜುತಿತ್ತು. ಆತನ ಕಂಡ್ರ ದೂರ ದೂರ ನಿಲ್ತಿದ್ರು. ನಮಗೂ ಪೂಜಾರಿ ಬಗ್ಗೆ ಗೌರವಾನೇ ಇತ್ತು. ಆದ್ರ ನಾವ್ ಕೇಳಿದ್ದು ಆತನಿಗೆ ಒಂದೇ ಮಾತು, ನಮ್ ಬಸ್ ಖರ್ಚೀಗಿ ಕೊಡ್ರಿ ಅಂದದ್ದಕ್ಕೆ ಕೆಂಡಾಮಂಡಲವಾದ. ಕೊಡಂಗಿಲ್ಲ. ಕೊಡ ನಡೀ ಇಲ್ಲ. ಜೋರಾದ ದನಿ ಇತ್ತು. ಗಡಸು ಮಾತಿತ್ತು. ನಾವೋ ನಾಲ್ಕಾರು ಜನ ದೂರದ ದಾರಿ ನಡಕೋತ ಊರು ಹ್ಯಾಂಗ್ ಮುಟ್ಟಬೇಕು ಚಿಂತಿ ಕಾಡಾಽಕ ಹತ್ತಿತು. ನಮ್ಮಲ್ಲಂತೂ ದಾರಿ ಖರ್ಚಿಗಿ ರೂಪಾಯಿಲ್ಲ. ಮೂರು ದಿನಾ ಜಾತ್ರಿಗಂತ ಬಂದ ಕೈಲಾದ ಹಾಡ್ಕಿ ಸೇವಾ ಸಲ್ಲೀವಿ. ಇಲ್ಲಾಂದ್ರ ಹ್ಯಾಂಗ, ಕೊಡಬೇಕು ಅಂದೆ. ಎಲ್ಲಾ ಇದು ನಿಮ್ಮಪ್ಪ ಹಚ್ಚಿದ ಆಶಾ ಅಂದ. ಜೀವಮಾನದಲ್ಲಿ ನಾ ಆಶಾ ಮಾಡೀದ ಮನಸ್ಯಾ ಅಲ್ಲ. ನಾ ಆಶಾ ಮಾಡಿದ್ರ ಹೊಲ, ಮನಿ ಅಂತ ಮಾಡ್ಕೊಂತಿದ್ದೆ. ಇದೆಂತಾ ಮಾತು ನನ್ನ ತಲೆ ಗರಂ ಆಯ್ತು. ನೀ ಗುಡಿ ಬಿಟ್ಟು ಹೊರಗೆ ಬಾ ಅಂದೆ. ಇಷ್ಟು ಹೇಳಿ ನಮ್ಮ ತಂದೀ ಕಟ್ಟೀದ ಬುತ್ತೀನ ಆದಾ ಆಶಾ ಮಾಡೆಂಗಿಲ್ಲ. ನಿನ್ನ ಹಣೆಬಾರ ನೋಡ್ಕೊ ಅಂದೆ. ಅಷ್ಟು ಮಾತು ಆದಮ್ಯಾಲ ನಾಕಾರು ರೂಪ್ಯಾ ಕೊಟ್ಟ. ನಾ ಹೇಳಿದ್ಯಾ.....

ಇಂದೇನಾಗ್ಯಾದ ಆಗ್ಯಾದ. ಅಂದ್ರ ಜಾತಿ ಮುಂದ ಆಗೋದ ಕಠೀಣಾ ಆದ ಅಂದು ಬಂದೆ. ನನ್ ಮನಸಿಗೀ ಬಾಳ ಬೇಜಾರಾಗಿತ್ತು. ಈ ಘಟನಾ ಆಗಿ ಇಂದಿಗೆ ೨೪ ವರ್ಷ ಆಯ್ತು. ಇನ್ನೂ ಜಾತ್ರಿ ಆಗಿಲ್ಲ ಎಂದು ಸಿದ್ದಪ್ಪ ಶಾಂತವಾಗಿ ಹೇಳಿದ.

ಭಂಡಾರ ಹಚ್ಚಿದ ಮ್ಯಾಲ ಹೋಗೋದು: ಪುರಾಣ ಹೇಳಬಾ ಎಂತ ಪುರಾಣಿಕರ ಬಲ್ಲಿ ಪುರಾಣ ಹೇಳೋ ಸ್ವಾಮಿಗಳ ಬಲ್ಲಿ ಕೇಳಲಾಕ ಹ್ವಾದಾಗ ಅವ್ರು ಒಪ್ಪಿದ್ರು ಅಂದ್ರ 'ಕಾಯಿ' (ತೆಂಗಿನಕಾಯಿ) ಕೊಟ್ಟ ಬರತಾರ. "ಕಾಯಿ ಕೊಡೋದು, ಅವ್ರು ತಗೋಳೋದು" ಅಂದ್ರೆ ನಿಮ್ಮ ಕಾರ್ಯಕ್ರಮಕ್ಕೆ ಬರಾಕ ನಾವು ಒಪ್ಪಿಗೊಂಡೀವಿ ಅಂದಂಗ. ಒಂದೊಂದು ಧರ್ಮ ಸಂಪ್ರದಾಯಗಳು ಬೇರೆ ಬೇರೆ.

ಅದೇ ರೀತಿ ದೇವರ ಹಾಡ್ಕಿ ಹೇಳಲಿಸಲಿಕ್ಕೆ, ಕರೀಲಿಕ್ಕೆ ಬಂದ ಮಂದಿ ಭಂಡಾರ ತಂದಿರ್ತಾರ. ನಾವು ಹಾಡ್ಕಿಗೀ ಒಪ್ಪಿಗಂಡೆ ಎಂದ್ರ ಭಂಡಾರ ಹಚ್ತರ. (ಭಂಡಾರ ಅಂದ್ರೆ ದೇವರ ಪ್ರಸಾದವಾಗಿ ಕೊಡುವ ಅರಿಶಿನ). ಭಂಡಾರ ಹಚಗಂಡೀವಿ ಅಂದ್ರ ಕಾರ್ಯಕ್ರಮಕ್ಕ ಒಪ್ಕೊಂಡೀವಿ ಅಂದಾಂಗ. ಕಾರ್ಯಕ್ರಮಕ್ಕಂತ ಒಪ್ಕೊಂಡು ಹ್ವಾದಮ್ಯಾಲ ಒಪ್ಪವಾಗಿ ಹಾಡ್ಕಿ ಮಾಡ್ರಿ. ಆ ಹಾಡ್ಕೀನೆ ಹಂಗಾದ. ಕೇಳಿದ ಜನ ಒಪ್ಪೋವಾಂಗೆ ಆದ. ದೇವರ ಸ್ತುತಿಯೊಂದಿಗೆ ಹಾಡ್ಕಿ ಸುರುವಾದ್ರ ನಾವು ಇಲ್ಲಿರಂಗಿಲ್ಲ. ದೇವಲೋಕಕ್ಕೆ ಹ್ವಾದಂಗೆ ಆಗ್ತದ. ದೇವಲೋಕದ ಪಾತ್ರಗಳು ನಾವೇ ಆಗಿರ್ತೀವಿ ಎಂಬಷ್ಟರ ಮಟ್ಟಿಗೆ ಭಾವಾವೇಶದ ಸನ್ನಿವೇಶಗಳನ್ನು ಬಿಚ್ಚಿಡುತ್ತಾನೆ.

ನಾನು, ನನ್ನ ಮಗ, ಮಗಳ ಮಕ್ಕು ಇದ್ರು. ಈ ಮೊದ್ಲು ನಾವೆಲ್ಲಾ ಕೂಡಿ ಹಾಡೋ ಮಂದಿ ಇದ್ವಿ, ಎಲ್ಲಾರು ಕೂಡಿ ಹಾಡ್ಕಿಗಿಂತ ಹೋಗ್ತಿದ್ವಿ, ಚೆನ್ನಾಗಿ ಹಾಡ್ಕಿ ಆಗ್ತಿತ್ತು. ನಮ್ ಮನಸ್ಸೀಗೆ ಬೇಜಾರು ಎಂದು ಆಗಿಲ್ಲ. ಎಲ್ಲಾರು ಒಮ್ಮನಸ್ಸಿನಿಂದ ಹಾಡೋದ್ರಿಂದ ದೇವಲೋಕದ ಕಳೀನೇ ಬಂದಿರ್ತದ. ಇತ್ತಿತ್ತಲಾಗಿ ಜನಕ್ಕ ಹಾಡ್ಕೀನೆ ಬರವಲ್ದು. ಅದ್ಕ ಕಾರಣಗಳು ಏನೇನು ಆವೋ ಏನೋ ನನಗಂತು ಗೊತ್ತಾಗಂಗಿಲ್ಲ "ನಾವು ಎಲ್ಲಿ ಹ್ವಾದಲ್ಲಿ ಖಾಲಿ ಬಂದಿಲ್ಲ". ಅವ್ರು ತಿಳಿದು ಕೊಟ್ಯಾರ. ನಾವು ಕೊಟ್ಕೋಟು ಕಂಡೀವಿ. ಇದರಾsಗ ನಮ್ಗ ಸಂತೃಪ್ತಿ ಆದಾ ಎಂದು ತನ್ನ ಹಾಡ್ಕಿಯನ್ನು ವಿಶ್ಲೇಷಿಸಿದ.

ಸಿದ್ದಪ್ಪ ಮೇಟಿ ಹೇಳ್ತಾ ಹ್ವಾದಂಗ ನಾನು ದೇವಲೋಕಕ್ಕ

ಹ್ವಾದಂಗೇ ಅನಿಸುತ್ತಿತ್ತು. ಆತ ಹೇಳೋದು ಕೇಳಬೇಕು ಅನಿಸುತ್ತಿತ್ತು. ಆದ್ರ ಆತ ಹೇಳ್ಯಾನೂ ನನ್ ಬಲ್ಲಿ ಕೇಳೋ ತಾಕತ್ ಬೇಕಲ್ಲ. ಎಂಟತ್ತು ದಿನ ಸರಿಸುಮಾರು ೬೪ ಕ್ಯಾಸೆಟ್ ನೂರು ತಾಸುಗಳ ಕಾಲ ಆತ ಆಡುತ್ತಾನೆಂದರೆ ಅದೊಂದು ಅದ್ಭುತ ಸಂಗತಿಯೇ ಸೈ.

"ಶಿವನೇ ನಮ್ಮಯಿ ದ್ಯಾವರು ಬಂದಾರ ಬನ್ನೀರೆ
ಸ್ವಾಮಿ ನಮ್ಮಯಿ ದ್ಯಾವರು ಬಂದಾರ ಬನ್ನೀರೇ"

ಎಂಬ ಸಾಲುಗಳೇ ನನ್ನ ಎದೆಯಾಳದಲ್ಲಿ ಗುನಗತೊಡಗಿತು. ಹಾಡಿನ ಲಾಲಿತ್ಯ, ಮಾಧುರ್ಯ ನನ್ನನ್ನು ಕನಸಿನ ಲೋಕಕ್ಕೆ ಕರೆದೊಯ್ಯುತ್ತಿತ್ತು. ಸಿದ್ದಪ್ಪನಿಗೆ ಸಿದ್ದಿಸಿದ 'ಹಾಲುಮತ' ಕಾವ್ಯ ಸಿದ್ಧಿಯ ಶಿಖರ ಮುಟ್ಟಿತ್ತು. ಮನಸ್ಸಿಗೂ ಮಿಗಿಲಾದ ಮಾತಾಗಿತ್ತು.

ಭಂಡಾರ ಹೊಡಿತಾರ: ಹಾಡ್ಕಿಗಂತ ಭಂಡಾರ ಹಚ್ಚಿದಾಗ ಹೋಗಲಕ್ಕ ಒಪ್ಕೊಂಡಗಾತ್ರಿ. ಒಪ್ಕೊಂಡಮ್ಯಾಲ ಹೋಗ್ತೀವಿ. ಹ್ವಾದಮ್ಯಾಲ ಹಾಡ್ಕಿ ಆಗ್ತಾದೆ. ಹಾಡ್ಕಿಯಲ್ಲಿ ಜನ ಬಾಳ ಖುಷಿಲಿಂದ ಕುಂತಿರತಾರ. ಅವ್ರು ಕೇಳಲಾಕ ಅಷ್ಟು ಖುಷಿಲಿಂದ ಕುಂತಾರಂದ್ರ ಹಾಡೋರಗಿ ಎಷ್ಟು ಖುಷಿ ಇರಲಿಕ್ಕಿಲ್ಲ. ಎಷ್ಟೆಂದರೂ ದೇವಲೋಕದ ಹಾಡ್ಕಿ ತಾನೆ. ಹಾಡಿನ ಹಾಡ್ಕಿ ಮುಖಾಂತರ ದೇವಲೋಕವನ್ನು ಭೂಮಿಗೆ ತರೋದಂದ್ರೆ ಸಾಮಾನ್ಯ ಕೆಲ್ಸವೇನು? ಅಂಥಾ ಅಸಾಮಾನ್ಯ ಕೆಲಸವನ್ನು ಸಾಮಾನ್ಯವಾಗಿ ಮಾಡೋದು ಅಂದ್ರೆ ಸುಲಭದ ಕೆಲಸವಲ್ಲ. ಅದಕ್ಕೆ ತುಂಬ ಪರಿಶ್ರಮ ಬೇಕು. ಅಂತಹ ಪರಿಶ್ರಮದ ಕೆಲಸವ ಶ್ರಮವಹಿಸಿ ಕರಗತ ಮಾಡಿಕೊಂಡಿರುವ ಸಿದ್ದಪ್ಪ ಮೇಟಿ ನಮ ನಿಮಗೆಲ್ಲರಿಗೂ ದೇವಲೋಕದಿಂದ ಇಳಿದು ಬಂದವನೆ ಅನ್ನಿಸುವುದರಲ್ಲಿ ಎರಡು ಮಾತಿಲ್ಲ.

"ಶಿವನೇ ನಮ್ಮಯಿ ದ್ಯಾವರು ಬಂದಾರ ಬನ್ನೀರೆ
ಸ್ವಾಮಿ ನಮ್ಮಾಯಿ ದ್ಯಾವರು ಬಂದಾರ ಬನ್ನೀರೇ"

ಎಂದು ಕೈಲಾಸದ ಹಾಡಿಕೆಯಿಂದ ಸುರುವಾದ ಹಾಡಿನ ಕಥೆ.

ಏನಿಲ್ಲವೆಂದರೂ ನಲವತ್ತು ಐವತ್ತು ಪುಟಗಳವರಿಗೆ ಒಂದೊಂದು ವೃತ್ತಾಂತಗಳು ನಡೀತವೆ. ಅಂದಿನ ಹಾಡಿಕೆ ಒಂದು ವೃತ್ತಾಂತವಾದರೂ ಆಗ್ತೋದು. ಎರಡು ವೃತ್ತಾಂತವಾದರೂ ಆಗ್ತೋದು. ಹೀಗೆ ಸೊಲ್ಲಿನಿಂದ ಸುರುವಾದ ಹಾಡು ಕಥೆಯನ್ನು ಹೇಳ್ತಾ ಹೇಳ್ತಾ ಮುಕ್ತಾಯಕ್ಕೆ ಬಂದಾಗ.

ಗೊಂಡಗುರುಬರು ನಾವೇನಯ್ಯ ಪದುಮಾಗೊಂಡನ ಮಕ್ಕಳೇ
ಗೊಂಡಗೋಳಾ ಪದಗೋಳಯ್ಯ ಇಲ್ಲಿಗೆ ಮುಗಿದಾವೇನಯ್ಯ
ಇಲ್ಲಿಗೆ ಇದು ಒಂದು ಸಂದೇವ ಹಾಡಿದರ ಪದ ಮುಂದೇನ
ಕಳಸವಿಟ್ಟರ ಕವಿತ ಕಟ್ಟ್ಯಾರ ಹೊನ್ನ ಜಗ್ಗೂನಿ ಗೌಡರೋ
ದೇವರ ಬಂದಾರ ಬನ್ನೀರೆ.

ಎಂದು ಕೈಲಾಸದ ಚಿತ್ರ ಕಣ್ಮುಂದೆ. ಕೇಳಿದ ಮನಕ್ಕೆ ಆನಂದದ ಸುಧೆ. ಕಥೆ ಮುಗೀತು ಸೂರ್ಯ ಮೂಡಲದಲ್ಲಿ ಮೂಡಿದ. ಹಕ್ಕಿಗಳ ಚಿಲಿಪಿಲಿ ರವ ಹಾಡಿಕೆ ಮುಗಿಯುತ್ತಲೇ ಮಂಗಳಾರತಿ ಆಗುತ್ತದೆ. ಭಂಡಾರ ಹೊಡಿತಾರ. ಭಂಡಾರ ಒಡೆಯುವದೆಂದರೆ **'ಕಾಯಿ'** ಒಡೆಯುವುದು. ಒಡೆದ ಕಾಯಿಯನ್ನು ಗೌರವಪೂರ್ವಕವಾಗಿ **'ಚಾಜ'** ಎಂದು ಹಾಡಿಕೆಯ ಗುಂಪಿನ ಮುಖ್ಯಸ್ಥನಿಗೆ ಕೊಡುತ್ತಾರೆ. ಭಂಡಾರ ಎಂದರೆ ಅರಿಷಿಣವನ್ನು ಎರಚುತ್ತಾರೆ. ಒಂದು ತಂಡದ ನಾಕೆಂಟು ಮಂದೀಗಿ ಖರ್ಚಿಗಂತ ಕೊಡ್ತಾರ. ಕಾಯಿ ಹೋಳು ಕೊಡ್ತಾರ. ಅಲ್ಲೀಗಿ ನಮ್ಮ ಕೆಲಸ ಮುಗೀತು. ಮತ್ತ ಮುಂದಿನ ಹಾಡ್ಕಿ ತನಕಾ ಕಾಯ್ಬೇಕು.

ಇದು ನಮ್ಮ ಜನಪದ ಸಾಹಿತ್ಯದ ದ್ರವ್ಯ. ಸಂತಸದ ಸಮಾರಾಧನೆಯನ್ನು ಸಕಲರಿಗೂ ಉಣಬಡಿಸುವುದೆಂದರೆ ಸ್ವರ್ಗಕ್ಕೆ ಕರೆದೊಯ್ದಂತೆ. ಕೇಳಿದ ನಾವು ನೀವೆಲ್ಲರೂ ಪುನೀತರಾದಂಥ ಧನ್ಯತಾಭಾವ.

'ಜನಪದ ಹಾಲುಮತ ಮಹಾಕಾವ್ಯ'ದ ಶೋಧ: ೧೯೭೬ರ ಡಿಸೆಂಬರ್ ತಿಂಗಳಲ್ಲಿ ಅಖಿಲ ಕರ್ನಾಟಕ ಜಾನಪದ ಸಮ್ಮೇಳನವನ್ನು ಕರ್ನಾಟಕ ವಿಶ್ವವಿದ್ಯಾಲಯ ಆಯೋಜಿಸಿತ್ತು. ಆ ಜಾನಪದ ಸಮ್ಮೇಳನದಲ್ಲಿ ಡಾ.ಬಿ.ಬಿ.ಹೆಂಡಿಯವರಿಗೆ ಡೊಳ್ಳಿನ ಹಾಡುಗಳನ್ನು ಕುರಿತು ಪ್ರಬಂಧ

ಮಂಡಿಸಲು ಕರೆ ಬಂದಿತ್ತು. ಆಗ ಕಲಬುರ್ಗಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿ ಸ್ನಾತಕೋತ್ತರ ಕೇಂದ್ರವಿದ್ದಿತು. ಆ ಕೇಂದ್ರದ ಮುಖ್ಯಸ್ಥರಾಗಿದ್ದವರು ಡಾ.ಬಿ.ಬಿ.ಹೆಂಡಿಯವರು. ಈ ಹೊತ್ತಿಗಾಗಲೇ "ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಜನಪದ ಕಥೆ-ಹಾಡುಗಳ ಸಂಗ್ರಹ, ಸಂಪಾದನೆ ಮತ್ತು ಪ್ರಕಟಣಾ ಯೋಜನೆ"ಯೊಂದರಲ್ಲಿ ಯು.ಜಿ.ಸಿ.ಯ ಧನ ಸಹಾಯದಿಂದ ಕೆಲಸ ಮಾಡುತ್ತಿದ್ದರು. ಹೆಂಡಿಯವರ ಊರು ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ 'ನಿಡಗುಂದಿ'. ತಮ್ಮ ಊರಿಗೆ ಹಾಡುಗಳನ್ನು ಕುರಿತು ಸಂಗ್ರಹ ಕಾರ್ಯಕ್ಕೆ ಹೋಗುವಾಗ ಶಹಾಪುರದ ಸಮೀಪ ಬಸ್ಸಿನಲ್ಲಿ ಈ ಮಹಾಕಾವ್ಯದ ಹಾಡುಗಾರನ ಭೇಟಿಯಾಯಿತು. ತನ್ನ ದಿಮ್ಮಿ (ಸಣ್ಣ ಡೊಳ್ಳು) ಹೆಗಲ ಮೇಲೆ ಕಂಬಳಿ, ಆಪ್ತಗಿರಿ ಕೊಡೆ, ಹಿಮ್ಮೇಳದ ಜನ ಇವರೆಲ್ಲರನ್ನು ಕಂಡು ಡಾ.ಹೆಂಡಿಯವರು ಸಿದ್ದಪ್ಪನಿಗೆ ಮಾತನಾಡಿಸಿದಾಗ ತಮಗೆ ಬೇಕಾದ ವಿಷಯ ಅಷ್ಟೇ ಅಲ್ಲದೆ, ಆತನೊಬ್ಬ ದೊಡ್ಡ ಹಾಡುಗಾರನಾಗಿರುವುದನ್ನು ಹಾಲುಮತ ಪುರಾಣ ಮಹಾಕಾವ್ಯವನ್ನು ಆತ ಹಾಡಬಲ್ಲವನಾದುದನ್ನು ತಿಳಿದುಕೊಂಡವರು ಅದರ ಸಂಗ್ರಹಕ್ಕಾಗಿ ಸಿದ್ದಪ್ಪ ಮತ್ತು ಸಂಗಡಿಗರನ್ನು ಆಮಂತ್ರಿಸಿಯೇ ಬಂದರು.

ನಾನಾಗ ಡಾ.ಹೆಂಡಿಯವರ ಜಾನಪದ ಯೋಜನೆಯಲ್ಲಿ 'ಸಹಾಯಕ ಸಂಶೋಧಕ'ನಾಗಿದ್ದೆ ಎಂದು 'ಜನಪದ ಹಾಲುಮತ ಮಹಾಕಾವ್ಯ'ದ ಸಂಪಾದಕರಾದ ಡಾ.ವೀರಣ್ಣ ದಂಡೆಯವರು ತಮ್ಮ ಪ್ರಸ್ತಾವನೆಯಲ್ಲಿ ಹೇಳುತ್ತಾರೆ. ೧೯೭೬-೭೭ರ ವರ್ಷದಲ್ಲಿ ಹತ್ತತ್ತು ದಿನಗಳ ಎರಡು ಕಂತುಗಳಲ್ಲಿ ಬಂದು ಸಿದ್ದಪ್ಪ ಮತ್ತು ಅವರ ಸಂಗಡಿಗರು ಜನಪದ ಹಾಲುಮತ ಮಹಾಕಾವ್ಯವನ್ನು ಹಾಡಿದರು. ಅದರ ಧ್ವನಿ ಮುದ್ರಣ ಮಾಡುವ ಕೆಲಸದ ಹೊಣೆಯು ನಮ್ಮದಾಗಿತ್ತು ಎಂದು ದಂಡೆಯವರು ಬರೆದಿದ್ದಾರೆ.

ಡಾ.ಎಚ್.ಜೆ.ಲಕ್ಕಪ್ಪಗೌಡರು ಜಾನಪದ ಅಕಾಡೆಮಿಯ

ಅಧ್ಯಕ್ಷರಾಗಿದ್ದಾಗ ಇಂತಹ ಒಂದು ಮಹಾಕಾವ್ಯ ಕಲುಬುರ್ಗಿ ಜಿಲ್ಲೆಯಲ್ಲಿ (ಅವಿಭಜಿತ ಕಲಬುರ್ಗಿ ಜಿಲ್ಲೆ, ಈಗ ಯಾದಗಿರಿ ಜಿಲ್ಲೆ) ದೊರೆಯುತ್ತದೆ ಎಂಬ ಸಂಗತಿಯನ್ನು ದಂಡೆಯವರು ಲಕ್ಕಪ್ಪ ಗೌಡರೊಂದಿಗೆ ಹಂಚಿಕೊಂಡಿದ್ದರಂತೆ. ಅವರು ಆ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಿ ಈ ಮಹಾಕಾವ್ಯದ ಸಂಗ್ರಹ, ಸಂಪಾದನೆ ಮತ್ತು ಪ್ರಕಟಣಾ ಯೋಜನೆಯನ್ನು ನನಗೆ ಕೊಡಮಾಡಿದರು. ಅಂತೆಯೇ ೧೯೯೪ರ ಮಾರ್ಚ್ ತಿಂಗಳಿನಿಂದ ಎಂದರೆ ಹಾಡುಗಾರ ಲಭ್ಯವಾದ ಇಪ್ಪತ್ತು ವರ್ಷಗಳ ನಂತರ ಸಂಗ್ರಹ ಸಂಪಾದನಾ ಕಾರ್ಯ ಆರಂಭವಾಯಿತು. ಈ ಹಾಡಿಕೆಯಲ್ಲಿ ಸಿದ್ದಪ್ಪನ ಜೊತೆಗೆ ಹಾಡಲು ಬಂದವರು ಐದು ಜನ. ಶಿವಗೇನಪ್ಪ, ಸಿದ್ದಪ್ಪ, ಮಾಳಗೆಪ್ಪ ಮೇಟಿ, ಮಾಳಗಪ್ಪ ಪೂಜಾರಿ ಹಾಗೂ ಮಹಾದೇವ ಎಂಬುದನ್ನು ದಂಡೆಯವರು ದಾಖಲಿಸಿದ್ದಾರೆ.

<u>**ಹಲವು ಕಥಾನಕಗಳ ಗುಚ್ಛವೇ ಮಹಾಕಾವ್ಯ:**</u> ಮಹಾಕಾವ್ಯ ಎಂದರೇನು ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು, ಇದು ಹೀಗೆಯೇ ಎಂದು ಹೇಳುವುದು ಸ್ವಲ್ಪ ಕಷ್ಟಕರವಾದ ಕೆಲಸವೇನೋ ಅನ್ನಿಸುತ್ತಿದೆ. 'ವಸ್ತುಕ' ಕಾವ್ಯಗಳಲ್ಲಿ ಒಂದೇ ಕಥಾನಕ ವಸ್ತು ಇರುತ್ತದೆ. ಆದರೆ 'ವರ್ಣಕ' ಕಾವ್ಯಗಳಲ್ಲಿ ಒಂದೇ ವಸ್ತು ಬರುವುದಿಲ್ಲ. ಒಂದು ವೃತ್ತಾಂತದ ಜೊತೆಗೆ ಹಲವಾರು ಬಿಡಿ ವೃತ್ತಾಂತಗಳು ಕಲೆತು ಮಹಾಕಾವ್ಯವಾಗಿ ರೂಪುಗೊಳ್ಳುತ್ತದೆ. ಇದು ಜನಪದ ಸಾಹಿತ್ಯದ ವಿಶಿಷ್ಟತೆ ಎನ್ನಬಹುದು.

'ಜನಪದ ಹಾಲುಮತ ಮಹಾಕಾವ್ಯ'ದಲ್ಲಿ ೧೪ ವೃತ್ತಾಂತಗಳಿವೆ. ಒಂದೊಂದು ವೃತ್ತಾಂತಕ್ಕೂ ಒಂದೊಂದು ಕಥಾಹಂದರ ಬರುತ್ತದೆ. ಇಡೀ ೧೪ ವೃತ್ತಾಂತಗಳನ್ನು ಹಾಡುಗಾರ ಮತ್ತವನ ತಂಡ ಒಂದೇ ಬೈಠಕ್‌ನಲ್ಲಿ ಹಾಡಲಿಕ್ಕೆ ಆಗುವುದಿಲ್ಲ. ಕಾರಣ ಕಾವ್ಯ ದೊಡ್ಡದು. ಸಮಯ ಸಣ್ಣದು. ಒಂದೇ ಬೈಠಕ್ ಎಂದರೆ ನಾಲ್ಕಾರು ತಾಸುಗಳ ಅವಧಿಯಷ್ಟೇ. ಈ ಬೈಠಕ್‌ನಲ್ಲಿ ಕಥೆ ಕೇಳುವವರ ಮನಸ್ಸಿಗಿಂತ ಹೇಳಿಸುವವರ ಆಶಯಕ್ಕನುಗುಣವಾಗಿ ಹಾಡುಗಾರ ಅವರಿಗಿಷ್ಟವಾದ ಒಂದು ವೃತ್ತಾಂತವನ್ನು ತೆಗೆದುಕೊಂಡು ಕಥೆ ಹೇಳುತ್ತಾನೆ. ಸಾಧಾರಣವಾಗಿ

ಒಂದು ಬೈಠಕ್‌ನಲ್ಲಿ ಮುಗಿಸುವಂಥದ್ದು. ರಾತ್ರಿ ಊಟವಾದ ನಂತರ ಆರಂಭವಾದ ಹಾಡುಗಾರಿಕೆ ಒಂದೊಂದು ಸಂಧಿಯ ನಂತರ ವಿರಾಮ ವೀಳ್ಯೆ ಕೊಡುವುದು. ವಿಭೂತಿ ಧರಿಸುವ ಕೆಲಸವೂ ನಡೆಯುತ್ತದೆ. ಇದಕ್ಕೆ ಮುಖ್ಯ ಕಾರಣ ಹಾಡುವವರು 'ದಮ್ಮು' ಆರಿಸಿಕೊಳ್ಳುವುದು.

ಕಥಾನಕದ ವೈಶಿಷ್ಟ್ಯವೆಂದರೆ ಹಾಡಿನ ಕೊನೆಯಲ್ಲಿ ಎಂದರೆ ವೃತ್ತಾಂತದ ಅಂತಿಮಕ್ಕೆ ಹಾಡಿಸಿದವರಿಗೆ, ಹಾಡಿದವರಿಗೆ, ಹಾಡಿನ ಜೊತೆ ದನಿಗೂಡಿಸಿದವರಿಗೆ ಮತ್ತು ಹಾಡು ಕೇಳಿದವರಿಗೆ ಹಾಡನ್ನು ಕಲಿಸಿದ ಗುರುವಿಗೆ ಶುಭವನ್ನು ಹರಸುವ, ಹಾರೈಸುವ ಕೆಲಸ ನಡೆಯುತ್ತದೆ. ಇದು ಶುಭಸೂಚಕವೂ ಹೌದು. ಆದರೆ ಹಾಡನ್ನು ನಿರ್ಲಕ್ಷಿಸಿದವರಿಗೆ ಕೇಡುಂಟೆಂದು ಹೇಳುವ ಮಾತುಗಳು ಕೇಳಿ ಬರುತ್ತವೆ. ಅಂದರೆ ಹಾಡುಗಾರರು ಹಾಡುವಾಗ, ಕೇಳುವವರು ಬೇಕು. ಕೇಳುವವರು ಇಲ್ಲವೆಂದ ಮೇಲೆ ಯಾರ ಮುಂದೆ ಹಾಡಬೇಕು? ಎಂಬ ಭಾವ ಇರಬಹುದು.

ಅದೇನೇ ಇರಲಿ ನಮ್ಮ ಜಾನಪದರು ತಮ್ಮ ನಂಬುಗೆಗೆ ಇಂಬುಗೊಟ್ಟು ಜನಪದ ಮಹಾಕಾವ್ಯವನ್ನು ಕಂಠಸ್ಥಗೊಳಿಸಿ ಇಡೀ ರಾತ್ರಿಯನ್ನು ಜಾಗರಣೆಗೊಳಿಸಿ ಕೇಳುವವರ ಮನಸ್ಸಿಗೆ ಮುದ ನೀಡುವ, ಸವಿಯೂಟವನ್ನು ಬಡಿಸುವ ಕೆಲಸವಂತೂ ನಿರಂತರವಾಗಿ ಇಂದಿಗೂ ಮಾಡುತ್ತಲೇ ಇರುವರು. ವನದ ಕೋಗಿಲೆ ತನ್ನ ಪಾಡಿಗೆ 'ಕೂಜನ' ಹಾಕುವಂತೆ ನಮ್ಮ ಜನಪದ ಹಾಡುಗಾರರು ಮತ್ತವರ ತಂಡ ತಮ್ಮ ಸಂತೋಷಕ್ಕಾಗಿ ಹಾಡುತ್ತ. ಜನಮಾನಸಕ್ಕೂ ಸಂತಸವನ್ನು ಹರಿಸುತ್ತಿರುವುದು ಸಂತೋಷವೆ ಸೈ.

ಜನಪದ ಕಾವ್ಯದ ಪ್ರಾದೇಶಿಕ ವೈಶಿಷ್ಟ್ಯ: ಜನಪದ ಕಾವ್ಯವೆಂದರೆ ಜನರಿಗೆ ಇಷ್ಟವಾದ ಕಾವ್ಯವೇ ಸರಿ. ಪ್ರಾದೇಶಿಕವಾಗಿ ಅದು ಮೇಲ್ಮೈಯನ್ನೂ, ಮಹಿಮೆಯನ್ನು ಸಾರುತ್ತದೆ. ಭಾಷೆಯ ಬಳಕೆಯಲ್ಲಿ ವೈವಿಧ್ಯತೆ ಇರುತ್ತದೆ. ಒಂದೊಂದು ಧರ್ಮ, ಒಂದೊಂದು ಸಂಪ್ರದಾಯ, ಸ್ಥಳೀಯ ಅಥವಾ ಪ್ರಾದೇಶಿಕ ನಂಬುಗೆ, ಪೌರಾಣಿಕ ಚರಿತ್ರೆಯ ನಾಯಕರು

ಮುಂತಾದವುಗಳು ತಮ್ಮ ಪ್ರಭಾವಲಯವನ್ನು ವಿಸ್ತರಿಸಿಕೊಳ್ಳುತ್ತವೆ. ಚರಿತ್ರೆಯ ನಾಯಕರು ವಾಸಿಸುವ ವಾಸಸ್ಥಳ. ಗುಡ್ಡ, ಗವಿ, ಬೆಟ್ಟ, ಕೋಶ, ಗುಡಿ, ಗಂಡಾರ ಮುಂತಾದ ಸ್ಥಳಗಳು ಮಹಿಮೆಗೆ ಒಳಗೊಂಡಿರುತ್ತವೆ. ಅಂದಹಾಗೆ ಈ ಸ್ಥಳಗಳಲ್ಲಿ ಜಾತ್ರೆ, ಉತ್ಸವ, ಪರಿಷೆ, ಮೆರವಣಿಗೆ ಹೀಗೆ ಹತ್ತು ಹಲವು ಆಯಾಮಗಳನ್ನು ಪಡೆದು ಜನಮಾನಸದ ಭಿತ್ತಿಯಲ್ಲಿ ಅಚ್ಚಳಿಯದ ಮುದ್ರೆಯನ್ನು ಒತ್ತುವಲ್ಲಿ ಯಶಸ್ವಿಯಾಗುತ್ತದೆ.

ಮೈಸೂರು, ಮಂಡ್ಯ, ಬೆಂಗಳೂರು ಸುತ್ತಮುತ್ತಲೂ ಮಲೆಯ ಮಾದೇಶ್ವರ, ಮಂಟೇಸ್ವಾಮಿಯ ಜನಜನಿತ ಕಥೆಗಳು, ಐತಿಹ್ಯಗಳು, ನಂಬುಗೆಗಳು, ಬೆಳಗಾವಿ, ಬಳ್ಳಾರಿ, ಬಿಜಾಪುರ, ಕಲುಬುರ್ಗಿ, ಯಾದಗಿರಿ ಜಿಲ್ಲೆಗಳಲ್ಲಿ ಹಾಲುಮತ ಪುರಾಣ, ಮೈಲಾರ ಲಿಂಗ. ಯಾದಗಿರಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನಲ್ಲಿ 'ಮೈಲಾಪುರ' ಎಂಬ ಗ್ರಾಮ. ಮೈಲಾಪುರ ಮಲ್ಲಯ್ಯನೆಂದೆ ಪ್ರಸಿದ್ಧಿ ಹೊಂದಿದೆ. ವರ್ಷಕ್ಕೊಮ್ಮೆ ಜರುಗುವ ಸಂಕ್ರಮಣ ಜಾತ್ರೆ ಲಕ್ಷಾಂತರ ಜನರನ್ನು ಸೆಳೆಯುತ್ತದೆ. ಮೈಲಾರ ಲಿಂಗನ ಹಾಡುಗಳನ್ನು ಹಾಡುತ್ತಾರೆ. ಬೆಳಗಾವಿ, ಸವದತ್ತಿ, ಹುಬ್ಬಳ್ಳಿ, ಸುತ್ತಮುತ್ತ 'ಯಲ್ಲಮ್ಮದೇವಿ'ಯ ಜಾತ್ರೆ ಕಥೆಗಳು ಹರಡಿಕೊಂಡು ಪ್ರಾದೇಶಿಕತೆಯ ಸೊಗಡು ಜನ ಮಾನಸವನ್ನು ತಟ್ಟುವಲ್ಲಿ ಸಿದ್ಧ ಹಸ್ತವಾಗಿ ಮಾದರಿಯಾಗಿ ನಿಲ್ಲುವಲ್ಲಿ ಯಶಸ್ಸನ್ನು ನಡೆಯುತ್ತದೆ.

ಹೀಗೆ ಒಂದೊಂದು ಪ್ರಾದೇಶಿತ ಕಥನಗಳು ಹಾಡುಗಾರಿಕೆಗೆ, ಹಾಡುವ ಮೇಳಕ್ಕೆ, ಅಲ್ಲಿಯ ಸ್ಥಳೀಯ ಭಾಷೆಗೆ, ಜನರ ನಂಬುಗೆಗೆ ಪಾತ್ರವಾಗಿ ಆನಂದಾನುಭೂತಿಯನ್ನು ಕೊಡುವಲ್ಲಿ ಯಶಸ್ವಿಯಾಗುತ್ತವೆ. ಯಾದಗಿರಿ ಜಿಲ್ಲೆಯ ಸಗರ ಗ್ರಾಮದ ಬೆಟ್ಟದಲ್ಲಿರುವ ಸಗರ ಯಲ್ಲಮ್ಮನ ಜಾತ್ರೆ ವೈಭವೋಪೇತವಾಗಿ ಜರುಗುತ್ತದೆ. ಕಿಕ್ಕಿರಿದ ಜನಸಂದಣಿ, ಭಂಡಾರ, ಜೋಗತಿಯರು, ಹರಕೆ ತೀರಿಸುವವರು, ಬಂಧು ಬಳಗದವರು, ನಂಬುಗೆಯ ಆರಾಧಕರು, ಸುತ್ತ-ಮುತ್ತಲಿನ ಭಕ್ತರೂ ಭಕ್ತಿಭಾವದಿಂದ ಬಂದು ದರ್ಶನ ಪಡೆದು ಪುನೀತರಾಗುತ್ತಾರೆ. ಇಂತಹ ಜಾತ್ರೆಯ ಸಂದರ್ಭಗಳಲ್ಲಿ ಹಾಡುಗಾರರಿಗೊಂದು ಅವಕಾಶ,

ಕೇಳುಗರಿಗೊಂದು ಸಂತಸದ ಸನ್ನಿವೇಶ. ಮಾಯಾಲೋಕಕ್ಕೆ ಕರೆದೊಯ್ದು ಮಂಗಳಮಯ ರಾತ್ರಿಯನ್ನು ಕಳೆದು ಅನುಭವ ಹೊಂದಿ ಮೈ ಮನ ಪುಳಕಿತವಾಗುತ್ತದೆ. ಹೊಸ ಉತ್ಸಾಹದಲ್ಲಿ ತೇಲಿದಂತಾಗುತ್ತದೆ ಮತ್ತು ಈ ಸಡಗರ ಸಂಭ್ರಮಕ್ಕಾಗಿ ಮುಂದಿನ ಜಾತ್ರೆವರೆಗೆ ಕಾಯಬೇಕಾಗುತ್ತದೆ. ಅವರವರ ಭಾಷೆಯ ಸೊಗಡು, ದೇವರ ಮಹಿಮೆ–ನಂಬುಗೆ, ಕಥಾನಾಯಕನಲ್ಲಿರುವ ಉದಾತ್ತ ಗುಣ, ಕೇಳುಗರಿಗೆ ಸಂತಸವನ್ನು ನೀಡುತ್ತದೆ. ಸಂಭ್ರಮವನ್ನು ಕೊಡುತ್ತದೆ.

<u>ಕಥೆ ಕೈಲಾಸದಿಂದ ಆರಂಭ:</u> ದೈವದ ಯಾವುದೇ ಕಥೆಗಳಾದರೂ ಆರಂಭವಾಗುವುದು ಕೈಲಾಸದಿಂದಲೆ. ನಮ್ಮ ಪೌರಾಣಿಕ ಕಾವ್ಯಗಳಾಗಲಿ, ಮಹಾಕಾವ್ಯಗಳಾಗಲಿ, ಆರಂಭವಾಗುವುದೇ ದೇವರ ಲೀಲೆಯಿಂದ. ಈ ದೇವರ ಲೀಲೆಗೂ, ಕೈಲಾಸಕ್ಕೂ ಅವಿನಾಭಾವ ಸಂಬಂಧವಿದ್ದಂತೆ ಕಥೆ ಹೆಣಿಕೆಯಾಗಿರುತ್ತದೆ. ಅಂತೆಯೇ **"ಜನಪದ ಹಾಲುಮತ ಮಹಾಕಾವ್ಯ"** ಕೂಡ ಆರಂಭವಾಗುವುದು ದೇವಲೋಕದಿಂದಲೆ. ಇದಕ್ಕೂ ಕೂಡ ವೈಜ್ಞಾನಿಕ ಕಾರಣವೇ ಮೂಲವಾಗಿ ವಿಚಾರದ ಲೇಪನ ಮೂಡಿ ಬಂದಿದೆ.

ವೈಜ್ಞಾನಿಕವಾಗಿ ಭೂಮಿಯ ಉತ್ಪತ್ತಿಗಿಂತ ಮೊದಲು, ಜೀವಿ ಹುಟ್ಟುವುದಕ್ಕಿಂತಲೂ ಮೊದಲು ಭೂಮಿಯ ಮೇಲೆ ಬರಿ ನೀರೇ ಇತ್ತು ಎಂಬ ಅಂಶವನ್ನು ನಾವು ವಿಜ್ಞಾನದಲ್ಲಿ ಅಭ್ಯಸಿಸುತ್ತೇವೆ. ನೀರಿನಿಂದ ಜಲಚರ ಪ್ರಾಣಿಗಳು, ಸಸ್ತನಿಗಳು, ಸಾವಿರಾರು ವರ್ಷಗಳ ತರುವಾಯ ನೀರು ಕಡಿಮೆಯಾಗಿ ಭೂಮಿ ಗೋಚರವಾಯಿತು. ಅಲ್ಲಿಂದಲೇ ಮನುಜಕುಲ ಉತ್ಪತ್ತಿಯಾಯಿತು ಎಂಬುದನ್ನು ಅರಿತುಕೊಂಡಿದ್ದೇವೆ.

ಈ ಹಾಲುಮತ ಮಹಾಕಾವ್ಯದಲ್ಲಿ ಕೂಡ ಈ ಭೂಮಿ ಇಲ್ಲದಂದು ಬರಿ ನೀರು ತುಂಬಿತ್ತು. ನೀರ ಮೇಲೊಂದು ಗುಳ್ಳೆ ಎದ್ದಿತು. ಇದರಿಂದಾಗಿ ರುಂಡ ಉತ್ಪತ್ತಿಯಾಯಿತು. ಈ ರುಂಡಕ್ಕೆ ದೇಹ, ವಿವಿಧ ಭಾಗಗಳು ಎಂದರೆ ಕೈಕಾಲುಗಳು ಮೂಡಿದವು. ಒಳಗಡೆ ನರಗಳು ಹುಟ್ಟಿಕೊಂಡು ಅಖಂಡೇಶ್ವರ ತಯಾರಾದನು. ಅಖಂಡೇಶ್ವರ ಎಂದರೆ

ಪೂರ್ಣತ್ವ ಎಂದೇ ಅರ್ಥೈಸಬಹುದು. ನಾದ ಹುಟ್ಟಿತು. ಜ್ಯೋತಿರ್ಲಿಂಗ ತಯಾರಾಯಿತು. ಮಾತು ಮಂತ್ರಗಳು ಹುಟ್ಟಿಕೊಂಡವು. ೫೨ ನಾದಗಳು, ೫೨ ಅಕ್ಷರಗಳು ಹುಟ್ಟಿದವು. ಅಕ್ಷರಲೋಕದಲ್ಲಿ ವಿದ್ಯೆ ಬುದ್ಧಿಗಳು ಹುಟ್ಟಿದವು. ಹೀಗೆ ಅಖಂಡೇಶ್ವರನ ಪಿಂಡಾಂಡ ತಯಾರಾಯಿತು. ನೀರೇ ನಿರಂಕಾರದಲ್ಲಿ ಎರಡು ವರ್ಷವುಳಿದನು. ನಂತರದಲ್ಲಿ ತನ್ನ ಎಡಕಿನ ಮಗ್ಗುಲಿನಿಂದ ಮೂರು ಗಣಿಕೆ ಎಲುವು ತೆಗೆದನು. ಅವುಗಳಿಗೆ ಮಂತ್ರ ಹಾಕಲಾಗಿ ಆದಿಶಕ್ತಿ ನಿರ್ಮಾಣವಾದಳು. ಆದಿಶಕ್ತಿ ಹುಟ್ಟಿದ ಮೇಲೆ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ಹುಟ್ಟಿದವು. ಈಕೆ ಮಡದಿಯಾಗಿ ಎಡಕ್ಕೆ ಬಂದಳು. ಆದಿಶಕ್ತಿ ಒಳಗೆ ಬೀಜದ ಮೇಲೆ ಅಂಕುರ ಪುಟಿದು ಗರ್ಭಿಣಿಯಾದಳು. ಇದರಿಂದ ರಕ್ಕಸರು ಹುಟ್ಟಿದರು. ಇಷ್ಟೊತ್ತಿಗೆ ಮೂರು ಯುಗಗಳು ಕಳೆದವು. ಎಲ್ಲೆಲ್ಲೂ ಅಂಧಕಾರ ಭೂಮಿಯಿಲ್ಲ, ಆಕಾಶವಿಲ್ಲ. ಅಂಧಕಾರದಲ್ಲಿ ಗಾಳಿ ಪ್ರಾರಂಭವಾಯಿತು. ಈಗ ನೀರಿನಲ್ಲಿ ತೆರೆಗಳು ಪ್ರಾರಂಭವಾದುವು. ನಿರ್ಮೂಲ ಬೀಜ ಹುಟ್ಟಿಕೊಂಡವು. ಲಕ್ಷಾನುಗಟ್ಟಲೆ ಅಂಡಾಂಡ, ಪಿಂಡಾಂಡಗಳು ಹುಟ್ಟಿದವು. ಬಸವಣ್ಣೆಪ್ಪ ಹುಟ್ಟಿದ. ನೀರಿಗೆ ಹೆಪ್ಪುಕೊಟ್ಟ. ತಾನು ಶಂಖದೊಳಗೆ ಕುಳಿತನು. ಕೌಡಿಯಲ್ಲಿ ಯಲ್ಲಮ್ಮ ಹುಟ್ಟಿದಳು. ಧುಂದಕಾರದಲ್ಲಿ ದುನಿಯಾ ಹಿಡಿದಳು. ಸೂರ್ಯಚಂದ್ರರು ಹುಟ್ಟಿದರು. ಇದರಿಂದಾಗಿ ಹಗಲು ರಾತ್ರಿಗಳು ಹುಟ್ಟಿದವು. ಹೀಗೆ ಮೂರು ಯುಗಗಳು ಮುಗಿದ ನಂತರ ಕತ್ತಲೆಂಬುದು ಹೋಗಿ, ನಾಲ್ಕನೆ ಯುಗದಲ್ಲಿ ಸೂರ್ಯ ಚಂದ್ರರು ಬಂದರು. ತಾಸು, ಗಳಿಗೆ, ವಾರ, ತಿಥಿ, ಹುಣ್ಣಿಮೆ, ಅಮಾವಾಸ್ಯೆಗಳು ಐದನೆ ಯುಗದಲ್ಲಿ ರೂಪುಗೊಂಡವು. ೨೧ ಲಕ್ಷ ಜಲಚರಗಳು ಜನಿಸಿದವು. ಈಗ ಆರನೆಯ ಯುಗ ನಡೆಯಿತು. ಮುಂದೆ ಬ್ರಹ್ಮ, ವಿಷ್ಣು, ರುದ್ರ, ಮಹೇಶ್ವರ, ಮಹಾದೇವ ಹುಟ್ಟಿದರು. ಇಲ್ಲಿಯೂ ಶಾಂತಮುತ್ತ್ಯಾ ತಯಾರಾದನು.

ಈ ಶಾಂತಮುತ್ತ್ಯ ಐದು ಮಂದಿ ರಕ್ಕಸರಿಗೆ ಮುರಿದು ಐದು ಕುರಿಗಳನ್ನು ನಿರ್ಮಿಸಿದನು. ಇನ್ನೊಬ್ಬ ರಕ್ಕಸನನ್ನು ಮುರಿದು ಟಗರ ತಯಾರು ಮಾಡಿದನು. ತಾನೇ ಇವುಗಳನ್ನು ಕಾಯುತ್ತಿದ್ದನು. ಉಣ್ಣೆ

ತೆಗೆದು ಕಂಬಳಿ ಮಾಡಿದನು. ಡುಳ್ಳಾಸುರ ದೈತ್ಯನ ತಲೆ ಶಿರ ಹೊಡೆದು ಕಂಬಳಿ ನೇಯಲು ಬೇಕಾದ ಸಾಮಾನುಗಳನ್ನು ಡೊಳ್ಳು, ಶಂಖ, ತಾಳ, ಕತ್ತರಿ, ಇತ್ಯಾದಿಗಳನ್ನು ತಯ್ಯಾರು ಮಾಡಿದನು. ವಡ್ಡಿ ವಾಲಗ, ಸುಖದ ಕೊಳಬಲ, ದುಃಖದ ಕೊಳಬಲ ನಿರ್ಮಿಸಿಕೊಂಡನು. ಕಂಬಳಿ ನೇದು ಶಿವ, ಪಾರ್ವತಿಯರಿಗೆ ಆಯ್ಯರಿ ಮಾಡಿದನು.

<u>ಹಾಲುಮತ ಏನಂತಪ್ಪ ಹೆಸರ ಕರೆಯುತಾರೇನ:</u> 'ಹಾಲು'– 'ಮತ' ಏನು? ಎಂಬ ಪ್ರಶ್ನೆಗೆ ಕಾವ್ಯದಲ್ಲಿಯೇ ಉತ್ತರ ದೊರಕುತ್ತದೆ. ಕಥೆಯನ್ನಿಷ್ಟು ಓದಿಯೇ ಮೇಲಿನ ಪದಗಳ ಅರ್ಥವನ್ನು ಅರಿತುಕೊಂಡರೆ ಅದಕ್ಕೊಂದು ಅರ್ಥವಿದೆ.

ದಕ್ಷಬ್ರಹ್ಮನ ಮಗಳು ಪಾರ್ವತಿಯನ್ನು ಶಿವನಿಗೆ ಕೊಟ್ಟು ಲಗ್ನ ಮಾಡುವಾಗ, ಶಾಂತಮುತ್ತ್ಯಾ ವಡ್ಡಿ ವಾಲಗ ಸಹಿತ ಬಂದು ಕಂಬಳೀ ಆಯ್ಯರಿ ಮಾಡಿದನು. ಕುರಿಕಾಯುತ್ತಾ ಇರುವ ಶಾಂತಮುತ್ತ್ಯಾ ಬೇಸರವಾಗಿ ಬ್ರಹ್ಮನಿಗೆ ಕುರಿಕಾಯಲು ಹಚ್ಚಿದನು. ನಂತರ ವಿಷ್ಣು, ರುದ್ರ, ಮಹೇಶ, ಮಹಾದೇವ ಒಬ್ಬರಾದ ನಂತರ ಒಬ್ಬರು ಕುರಿಗಳನ್ನು ಕಾಯ್ದರು. ಮಹಾದೇವನಿಗೆ ಬೇಸರವಾಗಲು ಅವನ ಹೆಂಡತಿ ಪಾರ್ವತಿ, ಷಣ್ಮುಖನನ್ನು ಬಗಲಲ್ಲಿ ಎತ್ತಿಕೊಂಡು ಸ್ವರ್ಗದ ಭೂಮಿಯಲ್ಲಿ ಕುರಿಕಾಯತೊಡಗಿದಳು. ಆಕೆಗೂ ಬೇಸರವಾಯಿತು. ತನ್ನ ನಂತರ ಕುರಿ ಕಾಯುವವರು ಯಾರೂ ಇಲ್ಲದೆ. ಸ್ವರ್ಗದ ಬಾಗಿಲು ತೆರೆದು, ಕುರಿಗಳನ್ನು ಮರ್ತ್ಯಲೋಕಕ್ಕೆ ಹೊಡೆದಳು. ಬಂಕಾಪುರದ ಭೂಮಿಯಲ್ಲಿ ಮೂರು ಕಣ್ಣಿನ ಹುತ್ತ ನೋಡಿ, ಕುರಿಗಳನ್ನು ಹುತ್ತಿನಲ್ಲಿ ಹೊಗಿಸಿದಳು. ಮೇಲೆ ಮುತ್ತಿಲಗಿಡ ಒಂದನ್ನು ನೆಟ್ಟಳು. ಈಗ ಷಣ್ಮುಖನಿಗೆ ಕೆಳಗೆ ಇಳಿಸಿ, ಕೈಕಾಲು ಮುಖ ತೊಳೆದುಕೊಂಡು, ಭೂಮಿಯ ಮೇಲೆ ಕುಳಿತಳು. ಎಡಕಿನ ಕೈಯಲ್ಲಿ ಭೂಮಿಯ ಮಣ್ಣು ಹಿಡಿದುಕೊಂಡು, ಬಲಕಿನ ಕೈಯಿಂದ ತನ್ನ ಎಡಗೈಲೆ ಬಲಮೊಲೆಯ ಹಾಲು ಹಿಂಡಿದಳು. ಕೆಸರ ಮುದ್ದೆ ಮಾಡಿ, ಅದರಿಂದ ಎರಡು ಮಣ್ಣು ಗೊಂಬೆಗಳನ್ನು ಮಾಡಿದಳು. ಎಡಗೈ ಮಣ್ಣಿನಿಂದ ಹೆಣ್ಣುಗೊಂಬೆಯನ್ನು, ಬಲಗೈ

ಮಣ್ಣಿನಿಂದ ಗಂಡುಗೊಂಬೆಯನ್ನು ತಯ್ಯಾರು ಮಾಡಿದಳು. ಅಷ್ಟರಲ್ಲಿ ಶಿವನು ಪಾರ್ವತಿಯನ್ನು ಹುಡುಕುತ್ತ ಅಲ್ಲಿಗೆ ಬಂದನು. ಆತನಿಂದ ಎರಡು ಗೊಂಬೆಗಳಿಗೂ ಜೀವ ತುಂಬಿಸಿದಳು. ಇವುಗಳಿಗೆ ಹೆಸರು ಏನಿಡಬೇಕೆಂದು ಆಲೋಚನೆಯಾಗಿ – 'ಹಾಲುಮತ' ಎಂದು ಕರೆದರು. (ಮತ ಏನಂದರ ಮಂತ್ರದ ಹಾಲನಂದರ ಮಣ್ಣೇನ)ಆ ಹೆಣ್ಣು ಗಂಡುಗಳಿಗೆ ಮುದ್ದವ್ವ–ಮುದ್ದುಗೊಂಡನೆಂದು ಕರೆದರು. ಈ ಗಂಡು ಹೆಣ್ಣುಗಳೇ ಗಂಡ ಹೆಂಡತಿಗಳಾದವು. ಮರ್ತ್ಯಲೋಕದಲ್ಲಿ ಕೀರ್ತಿ ತರಲಿ ಎಂದು ಹಾರೈಸಿದರು. ಈ ದಂಪತಿಗಳಿಗೆ ಆದಿಗೊಂಡ, ಅನಂತಗೊಂಡ, ಸಿದ್ಧಗೊಂಡ, ಪದುಮಗೊಂಡ ಎಂಬ ನಾಲ್ಕು ಜನ ಗಂಡು ಮಕ್ಕಳು ಜನಿಸಿದರು.

ಹೀಗೆಯೇ ಈ ಕಥೆ ಬೆಳೆಯುತ್ತಾ ಹೋಗುತ್ತದೆ. ಕೇಳುಗರನ್ನು ತನ್ನ ತೋಳತಕ್ಕೆಯಲ್ಲಿ ಬಾಚಿಕೊಳ್ಳುತ್ತದೆ. ಕಥಾ ಹಂದರ ಹರಿದ ಹಳ್ಳದಂತೆ ತಗ್ಗು ದಿನ್ನೆಗಳನ್ನು ದಾಟಿ ರಾಜಮಾರ್ಗದಿ ಹರಿಯುತ್ತಾ ಹೊಳೆ ಸೇರಿ ಮಹಾಕಾವ್ಯವಾಗಿ ಮನಕ್ಕೆ ಮುದ ನೀಡುತ್ತದೆ.

<u>**ಉಪಸಂಹಾರ:**</u> ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ದಿಗ್ಗಿ ಸೈದಾಪುರ ಗ್ರಾಮದ ಸಿದ್ದಪ್ಪ ಮೇಟ 'ಜನಪದ ಹಾಲುಮತ ಮಹಾಕಾವ್ಯ' ವನ್ನು ಕಂಠಸ್ಥಗೊಳಿಸಿಕೊಂಡು ಇಳಿ ವಯಸ್ಸಿನಲ್ಲೂ ಹಾಡಿಕೆ ಮಾಡುತ್ತಾ ಕರೆದವರ ಮನಸ್ಸನ್ನು ಸಂತೋಷಗೊಳಿಸುವ ಪುಣ್ಯಕಾರ್ಯದಲ್ಲಿ ನಿರತನಾಗಿದ್ದಾನೆ.

ತಂತ್ರಜ್ಞಾನ–ಸಮೂಹ ಮಾಧ್ಯಮಗಳ ಭರಾಟೆಯಲ್ಲೂ ಜನಪದ ಮಹಾಕಾವ್ಯಗಳು ಜನಪದರ ನಾಲಿಗೆಯ ಮೇಲೆ ತಲೆಮಾರಿನಿಂದ ಕಂಠಸ್ಥವಾಗಿ ಉಳಿದು ಬಂದಿರುವುದಕ್ಕೆ, ಮುಂದುವರಿಯುತ್ತಿರುವುದಕ್ಕೆ, ಆ ಮಹಾಕಾವ್ಯದ ಅಂತಶ್ಶಕ್ತಿಯೇ ಸರಿ. ಮಹಾಕಾವ್ಯವನ್ನು ಶರೀರಧಾರಿಯಾಗಿ ಮಾಡಿಕೊಂಡಿರುವ ಸಿದ್ದಪ್ಪ ಮೇಟಿಗೆ ಯಾವ ಹಮ್ಮು–ಬಿಮ್ಮುಗಳಿಲ್ಲ. ಹಾಡುವುದೊಂದೆ ಆತನ ಕಾಯಕ. ಆ ಕಾಯಕದಲ್ಲಿ ಬೇಕು, ಬೇಡಗಳಿಲ್ಲ. ಆತ್ಮ ಸಂತೋಷಕ್ಕಿಂತ ಮತ್ತೊಂದಿಲ್ಲ

ಎಂದು ನಂಬಿಕೊಂಡು ನಡೆದಿರುವ 'ಮೇಟಿ', ನಿಜಕ್ಕೂ ನಮ್ಮ ಜನಪದ ಹಾಡುಗಬ್ಬಕ್ಕೆ ಮೇಟಿಯೇ ಸರಿ.

ಆತನಿಗೆ ಸಿಕ್ಕ ರಾಜ್ಯೋತ್ಸವ ಪ್ರಶಸ್ತಿ, ಜಾನಪದಶ್ರೀ ಪ್ರಶಸ್ತಿ, ಆತನನ್ನು, ಆತನ ಬದುಕನ್ನು, ಆತನ ಹಾಡುಗಾರಿಕೆಯನ್ನು ಶ್ರೀಮಂತಗೊಳಿಸಿದೆ. ಮುಂದಿನ ತಲೆಮಾರಿಗೆ ಈ ಹಾಡಿಕೆ ಕೇಳಬೇಕೆಂದರೆ ಸಿದ್ದಪ್ಪನ ಬಾಯಿಂದ ಮತ್ತೊಮ್ಮೆ ಹಾಡಿಸಿ 'ವಿಡಿಯೋ ಸಿ.ಡಿ.' ಮಾಡಿದರೆ ಸಾರ್ಥಕ ಕೆಲಸವಾಗುತ್ತದೆ. ಭಾರತ ದೇಶದ ದುರಂತವೆಂದರೆ ಹೀಗೆ ಇತ್ತು, ಇಲ್ಲಿತ್ತು ಎಂದು ಐತಿಹ್ಯದ ಮೂಲಕ ಹೇಳುತ್ತೇವೆಯೇ ಹೊರತು. ದಾಖಲೆಯ ಮೂಲಕ ಅಲ್ಲ. ಸಮೂಹ ಮಾಧ್ಯಮಗಳು ಸಂಪದ್ಭರಿತವಾಗಿರುವುದರಿಂದ ಜಾನಪದ ಪರಿಷತ್ತು ಕರ್ನಾಟಕ ಸರಕಾರ, ಹಾಡಿನ ವಿಡಿಯೋಕರಣ ಮಾಡುವ ಕೆಲಸ ತುರ್ತಾಗಿ ಕೈಗೊಳ್ಳಬೇಕು. ಸಿದ್ದಪ್ಪನಲ್ಲಿ ತನ್ನ ಸಂಗಡಿಗರೊಂದಿಗೆ ಕೂಡಿಕೊಂಡು ಇನ್ನೂ ಹಾಡುವ ಶಕ್ತಿಯಿದೆ.

ಆತನ ಊರಿನಲ್ಲೇ ಆತನಿಗೊಂದು ವ್ಯವಸ್ಥಿತವಾದ ಮನೆಯೊಂದನ್ನು ಕಟ್ಟಿಸಿಕೊಟ್ಟು, ವಿಡಿಯೋ ಸಿ.ಡಿ.ಯನ್ನು ಅಲ್ಲಿ ತೋರಿಸುವ ಕೆಲಸವಾಗಬೇಕು. ಎಂದರೇನೇ ಜನಪದ ಸಾಹಿತ್ಯದ ಶಕ್ತಿ ಮತ್ತೆ ನೂರಾರು ವರ್ಷ ಬಾಳಿ ಬದುಕುತ್ತದೆ. ಗ್ರಾಮೀಣ ಪ್ರದೇಶದ ಜನಗಳಲ್ಲಿ ಹಾಡುತ್ತ ಬೆಳಕು ಕಾಣುತ್ತದೆ. ಹಳ್ಳಿಯ ಹಾಡುಗಾರನೊಬ್ಬನಿಗೆ ಇದಿಷ್ಟು ಸಣ್ಣ ಕೆಲಸ ಮಾಡಿಕೊಟ್ಟರೆ ಮುಂದಿನ ತಲೆಮಾರಿನ ಜನಾಂಗ ಇದರಿಂದ ಈ ಕೆಲಸದಿಂದ ಸ್ಫೂರ್ತಿ ಪಡೆಯುವುದರಲ್ಲಿ ಅನುಮಾನವಿಲ್ಲ. ಉಳಿಸುವ-ಬೆಳೆಸುವ ಕೆಲಸವೆಂದರೆ ಇದೇ ತಾನೆ.

* * * * *

ಗುಲಬರ್ಗಾ ಜಿಲ್ಲೆ ಶಹಾಪೂರ ತಾಲ್ಲೂಕು ಸೈದಾಪುರ ಗ್ರಾಮದ ಸಿದ್ದಪ್ಪ ಮೇಟಿಯವರು ಕನ್ನಡ ನಾಡು ಕಂಡ ಉತ್ಕೃಷ ಜನಪದ ಗಾಯಕರುಗಳಲ್ಲಿ ಒಬ್ಬರು. ಮೌಖಿಕ ನೆಲೆಯಲ್ಲಿ ಶತಮಾನಗಳಿಂದ ಹರಿದು ಬಂದ, ಹಲವು ಕಥಾನಕಗಳ ಗುಚ್ಛವಾದ 'ಹಾಲುಮತ ಪುರಾಣ'ವನ್ನು ಜನಸಮುದಾಯಕ್ಕೆ ಉಳಿಸಿಕೊಟ್ಟ ಕೀರ್ತಿ ಮೇಟಿಯವರದು. ಇಂತಹ ಅಪರೂಪದ ಗಾಯಕರನ್ನು ಪತ್ತೆ ಹಚ್ಚಿದ ಯಶಸ್ಸು ಡಾ.ಬಿ.ಬಿ. ಹೆಂಡಿಯವರದಾದರೆ, ನಾಡಿಗೆ ಪರಿಚಯಿಸಿ, ಮೇಟಿಯವರಿಗೆ ಜಾನಪದಶ್ರೀ ಪ್ರಶಸ್ತಿ ಲಭಿಸುವಂತೆ ಮಾಡಿದವರು ಡಾ.ವೀರಣ್ಣ ದಂಡೆಯವರು.

– ಡಾ. ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು
ನಂ.೧, ಜಲದರ್ಶಿನಿ ಬಡಾವಣೆ
ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್.ರಸ್ತೆ, ಬೆಂಗಳೂರು-೫೬೦೦೫೪